ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯಸಮಿತಿಯ ಮುಖಪತ್ರಿಕೆ

ಸಂಪುಟ 4 ಸಂಚಿಕೆ 7 ಫೆಬ್ರವರಿ 14, 1982 ಬೆಲೆ : 60 ಪೈಸೆ

ಸರ್ವಾಧಿಕಾರದ ಮತ್ತೊಂದು ಅಸ್ತ್ರ

ಕೇಂದ್ರ ಸರಕಾರ ಹದಿನಾರು ಸೇವಾ ವಿಭಾಗಗಳನ್ನು "ಅಗತ್ಯ ಸೇವೆ"ಗಳೆಂದು ಸಾರಿದೆ. ಈ ಸೇವೆಗಳನ್ನು 'ಅಸ್ತವ್ಯಸ್ತ' ಗೊಳಿಸುವ ವ್ಯಕ್ತಿಯನ್ನು ರಾಷ್ಟ್ರೀಯ ಭದ್ರತಾ ಶಾಸನದ ಪ್ರಕಾರ ಬಂಧಿಸಲಾಗುವುದು. ಅಂಚೆ–ತಂತಿ, ರಸ್ತೆ ರೈಲು, ವಿಮಾನ ಸಾರಿಗೆ, ಬಂದರು, ರಕ್ಷಣೆಗೆ ಸಂಬಂಧಿಸಿದ ಘಟಕಗಳು, ಬ್ಯಾಂಕ್, ಪೆಟ್ರೋಲಿಯಂ ಉತ್ಪಾದನೆ ಹಾಗೂ ಹಂಚಿಕೆ ಇತ್ಯಾದಿ ಈ 16 'ಅಗತ್ಯ ಸೇವೆ'ಗಳಲ್ಲಿ ಸೇರಿವೆ.

ಈ ಅಧಿಸೂಚನೆ ಸರ್ವೋಚ್ಚ ನ್ಯಾಯಾಲಯದ ಒಂದು ತೀರ್ಪಿನಿಂದ ಕಂಡುಬಂದ ಒಂದು ಅಭಾವವನ್ನು ಸರಿಪಡಿಸುತ್ತದೆ ಎಂದು ವಾದಿಸಲಾಗಿದೆ. ಸಿ.ಐ.ಟಿ.ಯು ನ ಜನರಲ್ ಕೌನ್ಸಿಲ್‌ನ ಸದಸ್ಯ, ಪಿ. ಕೆ. ರಾಯ್ ರವರನ್ನು ಅವರು, ಅಗತ್ಯಸೇವೆಯನ್ನು ಅಸ್ತವ್ಯಸ್ತಗೊಳಿಸಿದ್ದಾರೆಂಬ ನೆವದ ಮೇಲೆ 'ರಾಷ್ಟ್ರೀಯ ಭದ್ರತಾ ಶಾಸನ'ದ ಪ್ರಕಾರ ಸರಕಾರ ಬಂಧಿಸಿತ್ತು.

ಸಂಪಾದಕೀಯ

ಅಗತ್ಯಸೇವೆ ಯಾವುದು ಎಂಬುದನ್ನು ಸೂಚಿಸದೆ ಆ ವ್ಯಕ್ತಿಯನ್ನು ಸರಕಾರ ಬಂಧಿಸಲು ಸಾಧ್ಯವಿಲ್ಲ ಎಂದು ಸರ್ವೋಚ್ಚ ನ್ಯಾಯಾಲಯ ತೀರ್ಪಿನಲ್ಲಿ ಹೇಳಿತ್ತು. ಆದ್ದರಿಂದಲೇ ಅಗತ್ಯಸೇವೆಗಳನ್ನು 'ಸೂಚಿಸುವ' ಈ ಸರಕಾರೀ ಅಧಿಸೂಚನೆ.

ಅಧಿಸೂಚನೆಯಲ್ಲಿರುವ ಪಟ್ಟಿಯನ್ನು ಪರಿಶೀಲಿಸಿದರೆ ಅದು ಕೈಗಾರಿಕಾ, ವ್ಯಾಪಾರೀ, ಹಣಕಾಸು ಸಂಬಂಧಿ ಹಾಗೂ ಸರಕಾರೀ ವಲಯಗಳಲ್ಲಿನ ಎಲ್ಲಾ ಚಟುವಟಿಕೆಗಳನ್ನೂ ಒಳಗೊಳ್ಳುವಷ್ಟು ಸರ್ವವ್ಯಾಪಿಯಾಗಿದೆಯೆಂದು ತಿಳಿಯುತ್ತದೆ. 'ಕೈಗಾರಿಕಾ ಅಭಿವೃದ್ಧಿ ನಿಯಂತ್ರಣ ಶಾಸನ'ದ ಪರಿಶಿಷ್ಟದಲ್ಲಿ ಸೇರಿರುವ ಎಲ್ಲಾ ಕೈಗಾರಿಕೆಗಳನ್ನು ಅವು ರಕ್ಷಣಾ ಅಗತ್ಯಗಳಿಗೆ ಪೂರೈಕೆ ಮಾಡುವುದಾದರೆ 'ಅಗತ್ಯ ಸೇವೆ'ಗಳ ಪಟ್ಟಿಯಲ್ಲಿ ಸೇರಿಸಬಹುದು ಎಂದು ಈ ಸರಕಾರೀ ಅಧಿಸೂಚನೆ ಹೇಳುತ್ತದೆ.

(ಕಡೇ ಪುಟ ನೋಡಿ)

ಅಲ್ಪಸಂಖ್ಯಾತರ ಭಾಷೆಗಳಿಗೆ ರಕ್ಷಣೆ ನೀಡಲು ಸಿ.ಪಿ.ಐ.(ಎಂ) ಒತ್ತಾಯ

ರಾಜ್ಯದಲ್ಲಿ ಸಂಸ್ಕೃತ ಪ್ರಥಮ ಭಾಷೆಯಾಗುವುದು ಎಂಬ ಸರಕಾರದ ಘೋಷಣೆಗೆ ಸಂಸ್ಕೃತ ಪಂಡಿತರು ಮತ್ತು ಮಠಾಧಿಪತಿಗಳು ಬಿಟ್ಟು ಎಲ್ಲಾ ಜನವಿಭಾಗಗಳಿಂದ ಬಲವಾದ ಪ್ರತಿಭಟನೆ ಬಂದಿತು. ಆದ್ದರಿಂದ ಭಾಷಾ ಪ್ರಶ್ನೆಯ ಬಗ್ಗೆ ವಿಚಾರ ಮಾಡಲು ಸರಕಾರ ಗೋಕಾಕ್ ಸಮಿತಿಯನ್ನು ರಚಿಸಬೇಕಾಯಿತು. ಕನ್ನಡ ಪ್ರಥಮ ಭಾಷೆಯಾಗಬೇಕೆಂದು ಗೋಕಾಕ್ ಸಮಿತಿ ವರದಿ ಸಲ್ಲಿಸಿದಾಗ ಸರಕಾರ ಅದನ್ನು ಸ್ವೀಕರಿಸಲು ಹಿಂದೇಟು ಹಾಕಲಾರಂಭಿಸಿತು. ಸಮಿತಿಯ ವರದಿಯನ್ನು ಜಾರಿಗೊಳಿಸಬೇಕೆಂದು ದೊಡ್ಡ ಆಂದೋಲನ ನಡೆಯಿತು.

"ಕನ್ನಡ ಆಡಳಿತದ ಎಲ್ಲಾ ಹಂತಗಳಲ್ಲಿ ಅಧಿಕೃತ ಭಾಷೆಯಾಗಬೇಕು ಹಾಗೂ ಅತ್ಯಂತ ಉಚ್ಚ ಮಟ್ಟದವರೆಗೆ ಶಿಕ್ಷಣ ಸಂಸ್ಥೆಗಳಲ್ಲಿ ಶಿಕ್ಷಣ ಮಾಧ್ಯಮವಾಗಬೇಕು ಎಂದು ಸಿ. ಪಿ. ಐ. (ಎಂ) ಕರ್ನಾಟಕ ರಾಜ್ಯ ಸಮಿತಿ ಒತ್ತಾಯಿಸಿತ್ತು. ಕನ್ನಡ ಭಾಷೆಯ ಜತೆಗೆ ಅಲ್ಪಸಂಖ್ಯಾತರ ಭಾಷೆಗಳಿಗೂ ಶಿಕ್ಷಣ ಸಂಸ್ಥೆಗಳಿಗೆ ಅವಕಾಶವಿರಬೇಕು. ಅಂದರೆ ಮಾತೃ ಭಾಷೆಯಲ್ಲಿ ಶಿಕ್ಷಣ ಪಡೆಯುವ ಹಕ್ಕು ಇರಬೇಕು." ಉರ್ದು ಭಾಷೆ ಮತ್ತು ಲಿಪಿಯನ್ನು ಸರಕಾರ ರಕ್ಷಿಸಬೇಕು.

ಕೆಲವು ಸಂಕುಚಿತವಾದೀ ಶಕ್ತಿಗಳು ಗೋಕಾಕ್ ಸಮಿತಿಯ ವರದಿಯನ್ನು ಉಪಯೋಗಿಸಿಕೊಂಡು ಕೋಮುಗಳ ನಡುವೆ ದ್ವೇಷ ಹರಡಲು ಪ್ರಯತ್ನಿಸುತ್ತಿರುವ ಬಗ್ಗೆ ಸಿ. ಪಿ. ಐ. (ಎಂ) ಕರ್ನಾಟಕ ರಾಜ್ಯಸಮಿತಿ ಆತಂಕಗೊಂಡಿದೆ. ಸಿ. ಪಿ. ಐ. (ಎಂ) ರಾಜ್ಯ ಸಮಿತಿ ಆಡಳಿತದ ಎಲ್ಲಾ ಹಂತಗಳಲ್ಲಿ ಹಾಗೂ ಶಿಕ್ಷಣದ ಎಲ್ಲಾ ಹಂತಗಳಲ್ಲಿ ಕನ್ನಡವನ್ನು ಜಾರಿಗೊಳಿಸುವಾಗ ಅಲ್ಪಸಂಖ್ಯಾತರ ಭಾಷೆಗಳಿಗೆ ರಕ್ಷಣೆ ಕೊಡಬೇಕು ಹಾಗೂ ಕೋಮು ಸೌಹಾರ್ದ ಮತ್ತು ಶಾಂತಿಯನ್ನು ಕಾಯಬೇಕೆಂದು ಸರಕಾರವನ್ನು ಒತ್ತಾಯಿಸುತ್ತದೆ.

"ಪರಿಸ್ಥಿತಿಯು ಬಿಗುವು ಹೆಚ್ಚುತ್ತಿರುವುದರಿಂದ ಹಾಗೂ ಅಲ್ಪಸಂಖ್ಯಾತರಲ್ಲಿ ಶಂಕೆಯಿರುವುದನ್ನು ಮನಗಂಡು ಸರಕಾರ ಗೋಕಾಕ್ ಸಮಿತಿಯ ಶಿಫಾರಸುಗಳನ್ನು ಪುನಃ ಪರಿಶೀಲಿಸಿ ಎಲ್ಲಾ ಭಾಷೆಗಳ ಹಾಗೂ ರಾಜಕೀಯ ಪಕ್ಷಗಳ ಪ್ರತಿನಿಧಿಗಳ ಅಭಿಪ್ರಾಯಗಳನ್ನು ಗಮನಕ್ಕೆ ತಗೊಂಡು ಸಮಸ್ಯೆ ಪರಿಹರಿಸಬೇಕು."

ಕೆಂಪಾದ ಕೃಷ್ಣಾತೀರ



ವಿಜಯವಾಡಾದಲ್ಲಿ ೧೧ನೇ ಅಧಿವೇಶನದ ಅಂಗವಾಗಿ ನಡೆದ ಬೃಹತ್ ಬಹಿರಂಗ ಸಭೆಯ ದೃಶ್ಯ

ಶಾಸಕರ ವರ್ತನೆ ಪ್ರತಿಭಟಿಸಿ ಬಂದ್

ಜನವರಿ 26ರಂದು ಗಣರಾಜ್ಯೋತ್ಸವದ ಅಂಗವಾಗಿ ಬೆಳಗಾಂ ಜಿಲ್ಲೆಯ ಸವದತ್ತಿಯಲ್ಲಿ ಏರ್ಪಡಿಸಿದ ಸಾರ್ವಜನಿಕ ಸಭೆಯಲ್ಲಿ ಶಾಲಾ ಶಿಕ್ಷಕರಿಗೆ ಅವಮಾನಕರವಾಗಿ ಮಾತನಾಡಿ ಅಂದಿನ ಕಾರ್ಯಕ್ರಮವನ್ನು ಭಾಗಗೊಳಿಸಿದ ಸವದತ್ತಿಯ ಶಾಸಕ ಜಿ. ಕೆ. ಟಕ್ಕೇದ (ಕಾಂಗ್ರೆಸ್)ರ ವರ್ತನೆಯನ್ನು ಪ್ರತಿಭಟಿಸಿ ಸವದತ್ತಿ ಬಂದ್ ಆಚರಿಸಲಾಯಿತು.

ತನ್ನ ಅನುಚಿತ ವರ್ತನೆಗಾಗಿ ಬಹಿರಂಗ ಕ್ಷಮೆ ಕೋರಬೇಕೆಂಬ ವಿದ್ಯಾರ್ಥಿಗಳ ಬೇಡಿಕೆಯನ್ನು ನಿರ್ಲಕ್ಷಿಸಿ ಹೊರಟು ನಿಂತ ಟಕ್ಕೇದರಿಗೆ ಸವದತ್ತಿಯ ಪ್ರಾಥಮಿಕ, ಮಾಧ್ಯಮಿಕ ಹಾಗೂ ಕಾಲೇಜ್ ವಿದ್ಯಾರ್ಥಿಗಳು ಧಿಕ್ಕಾರ ಹಾಕುತ್ತಾ ಅವರ ಮನೆಯವರೆಗೆ ಹಿಂಬಾಲಿಸಿದರು. ಮರುದಿನ ಸ್ಥಳೀಯ ಎಸ್.ಎಫ್.ಐ. ಕೊಟ್ಟ ಕರೆಯ ಮೇರೆಗೆ ಸವದತ್ತಿ ತಾಲ್ಲೂಕು ಬಂದ್ ಆಚರಿಸಲಾಯಿತು. ವ್ಯಾಪಾರಸ್ಥರು ತಮ್ಮ ಅಂಗಡಿಗಳನ್ನು ಮುಚ್ಚಿ ವಿದ್ಯಾರ್ಥಿಗಳಿಗೆ ತಮ್ಮ ಬೆಂಬಲ ವ್ಯಕ್ತಪಡಿಸಿದರು. ಎಲ್ಲಾ ಶೈಕ್ಷಣಿಕ ಸಂಸ್ಥೆಗಳು ಮುಚ್ಚಲ್ಪಟ್ಟಿದ್ದವು. ಉಗರಗೋಳ, ಹಿರೇಕುಂಬಿ ಮೊದಲಾದ ಹಳ್ಳಿಗಳಲ್ಲಿ ಕೂಡಾ ಯಶಸ್ವಿಯಾಗಿ ಬಂದ್ ಆಚರಿಸಲಾಯಿತು.

ಜ. 27ರಂದು ಹನ್ನೊಂದು ಘಂಟೆಗೆ ಸ್ಥಳೀಯ ಕಾಲೇಜು ಮೈದಾನದಿಂದ ವಿದ್ಯಾರ್ಥಿಗಳು ಬೃಹತ್ ಮೆರವಣಿಗೆ ಹೊರಡಿಸಿ ಅನುಚಿತವಾಗಿ ವರ್ತಿಸಿದ ಶಾಸಕರ ಕುರಿತು ಆಕ್ರೋಶ ವ್ಯಕ್ತಪಡಿಸಿ ಅವರ ಪ್ರತಿಕೃತಿಯನ್ನು ವ್ಯಕ್ತಪಡಿಸಿದರು.

ಸಾಯಂಕಾಲ 5 ಘಂಟೆಗೆ ಸವದತ್ತಿಯ ಗಾಂಧಿ ಚೌಕದಲ್ಲಿ ಬಹಿರಂಗ ಸಭೆ ನಡೆಯಿತು. ಸಭೆಯ ಅಧ್ಯಕ್ಷತೆಯನ್ನು ಕಾಂ. ಎಸ್.ಎಚ್. ಕಪ್ಪಣ್ಣನವರ ವಹಿಸಿದ್ದರು. ಸಭೆಯನ್ನುದ್ದೇಶಿಸಿ ನಿತ್ಯಾನಂದಾಜಿ, ನರಗುಂದ ವಕೀಲರು ಮತ್ತು ವಿದ್ಯಾರ್ಥಿ ಮುಖಂಡ ಬಸವರಾಜ ಶಿಂತ್ರಿ ಮಾತನಾಡಿ ಶಾಸಕರ ವರ್ತನೆಯನ್ನು ಖಂಡಿಸಿದರು. ತಾಲ್ಲೂಕಿನಾದ್ಯಂತ ಜಿ. ಕೆ. ಟಕ್ಕೇದರ ಯಾವತ್ತೂ ಕಾರ್ಯಕ್ರಮಗಳನ್ನು ಬಹಿಷ್ಕರಿಸುವ ನಿರ್ಣಯಗಳನ್ನು ಸಭೆಯಲ್ಲಿ ಅಂಗೀಕರಿಸಲಾಯಿತು. ಕೊನೆಯಲ್ಲಿ ಎಸ್.ಎಫ್.ಐ. ಘಟಕದ ಅಧ್ಯಕ್ಷ ಎಲ್. ಆರ್. ಅಂಗಡಿಯವರು ವಂದಿಸಿದರು.

●

ಸಂಘದ ಕಚೇರಿ ಉದ್ಘಾಟನೆ

5-1-82ರಂದು ಮೈಸೂರಿನ ವಿಕ್ರಾಂತ್ ಟೈರ್ಸ್ ಎಂಪ್ಲಾಯೀಸ್ ಯೂನಿಯನ್ನಿನ ಕಚೇರಿಯನ್ನು ಸಂಘದ ಕಾನೂನು ಸಲಹೆಗಾರರಾದ ಕಾಂ. ಎಸ್. ಸೂರ್ಯನಾರಾಯಣ ರಾವ್ ಉದ್ಘಾಟಿಸಿದ್ದಾರೆ. ಈ ಕಾರ್ಯಕ್ರಮದ ಅಂಗವಾಗಿ ಕೆ. ಆರ್. ಎಸ್. ರೋಡಿನಲ್ಲಿರುವ ಕುಂಬಾರ ಕೊಪ್ಪಲಿನಲ್ಲಿ ಬಹಿರಂಗ ಸಭೆಯನ್ನು ಏರ್ಪಡಿಸಲಾಗಿತ್ತು. ಸಭೆಯನ್ನುದ್ದೇಶಿಸಿ ಕಾಂ. ಎಸ್. ಸೂರ್ಯನಾರಾಯಣರಾವ್ ಮಾತನಾಡಿದರು. ಈ ಸಭೆಗೆ ಸುತ್ತಮುತ್ತಲಿನ ಕಾರ್ಖಾನೆಗಳಿಂದ ನೂರಾರು ಕಾರ್ಮಿಕರು ಆಗಮಿಸಿದ್ದರು. ಶ್ರೀ ದಾಸಪ್ಪ ಅಧ್ಯಕ್ಷತೆ ವಹಿಸಿದ್ದರು.

ಆರಂಭದಲ್ಲಿ ಸಂಘದ ಪ್ರಧಾನ ಕಾರ್ಯದರ್ಶಿ ಕಾಂ. ರಾಜೇಂದ್ರ ಸ್ವಾಗತಿಸಿದ್ದರು. ಕೊನೆಯಲ್ಲಿ ಡೇವಿಡ್ ಪುರುಷೋತ್ತಮ ವಂದಿಸಿದರು.

○

ಮುಷ್ಕರದಲ್ಲಿ ಪಾಲ್ಗೊಂಡಿದ್ದಕ್ಕಾಗಿ

೨೦೦೦ ಕಾರ್ಮಿಕರ ವಜಾ

ಹರಿಯಾಣದ ಹನ್ಸಿಯ 'ಕೋ-ಆಪರೇಟಿವ್ ಸ್ಪಿನ್ನಿಂಗ್ ಮಿಲ್' ಮತ್ತು ಹಿಸ್ಸಾರನ 'ಹರಿಯಾಣಾ ಕಾಂಕಾಸ್ಟ್ ಲಿಮಿಟೆಡ್'ನ ಆಡಳಿತ ವರ್ಗಗಳು, ಜ. 19ರ ಅಖಿಲ ಭಾರತ ಸಾರ್ವತ್ರಿಕ ಮುಷ್ಕರದಲ್ಲಿ ಪಾಲ್ಗೊಂಡಿದ್ದಕ್ಕಾಗಿ 2000 ಕಾರ್ಮಿಕರನ್ನು ಕೆಲಸದಿಂದ ವಜಾಗೊಳಿಸಿವೆ.

ಸಿ. ಐ. ಟಿ. ಯು. ಸೆಕ್ರೆಟರಿ ಕಾಂ. ಎಂ. ಕೆ. ಪಂಧೆಯವರು ಈ ಎರಡೂ ಆಡಳಿತವರ್ಗದವರ ಅನುಚಿತ ಕ್ರಮವನ್ನು ಪ್ರತಿಭಟಿಸಿ ಕಾರ್ಮಿಕಮಂತ್ರಿ ಶ್ರೀ ಭಗವತ್ ಝಾ ಆಝಾದ್ ಅವರಿಗೆ 22-1-82ರಂದು ಪತ್ರವೊಂದನ್ನು ಬರೆದಿದ್ದಾರೆ. ಪತ್ರದ ಸಾರಾಂಶ ಇಂತಿದೆ:

"ಜನವರಿ 19ರ ಅಖಿಲ ಭಾರತ ಸಾರ್ವತ್ರಿಕ ಮುಷ್ಕರದಲ್ಲಿ ಪಾಲ್ಗೊಂಡಿದ್ದಕ್ಕಾಗಿ ಹನ್ಸಿ ಕೋ-ಆಪರೇಟಿವ್ ಸ್ಪಿನ್ನಿಂಗ್ ಮಿಲ್ ಮತ್ತು ಹಿಸ್ಸಾರನ ಹರಿಯಾಣಾ ಕಾಂಕಾಸ್ಟ್ ಲಿಮಿಟೆಡ್‌ನ ಆಡಳಿತವರ್ಗದವರು 2000 ಕಾರ್ಮಿಕರನ್ನು ವಜಾಮಾಡಿದ್ದರ ಕುರಿತು ನಿಮ್ಮ ಗಮನಸೆಳೆಯಬಯಸುತ್ತೇನೆ."

"ಮುಷ್ಕರದ ಮುನ್ನ ಈ ಕಾರ್ಖಾನೆಗಳ ಕಾರ್ಮಿಕ ಸಂಘಗಳು ನೋಟಿಸನ್ನು ಆಡಳಿತವರ್ಗಗಳಿಗೆ ಸಲ್ಲಿಸಿರುವ ವಿಷಯ ನನಗೆ ಗೊತ್ತಿದೆ. ಅದೂ ಮೇಲಾಗಿ ಈ ಮುಷ್ಕರವನ್ನು ಹರಿಯಾಣಾ ಸರಕಾರ ಪ್ರತಿಬಂಧಿಸಿರಲಿಲ್ಲ. ಮತ್ತು ಮುಷ್ಕರ ಸಂಪೂರ್ಣ ಶಾಂತಯುತವಾಗಿ ನಡೆದಿದೆ".

"ಈ ಆಡಳಿತವರ್ಗಗಳು ಒಮ್ಮುಖ ತೀರ್ಮಾನ ಕೈಗೊಂಡು ಮಿಲ್‌ಗಳನ್ನು ಮುಚ್ಚಿಬಿಟ್ಟಿದ್ದಾರೆ. ಆಡಳಿತವರ್ಗಗಳ ಈ ಕಾರ್ಮಿಕವಿರೋಧಿ ನೀತಿಯ ಕುರಿತು ಹರಿಯಾಣಾ ಸರಕಾರ ಮಧ್ಯಪ್ರವೇಶಿಸದೇ ಸುಮ್ಮನಿರುವುದು ಆಶ್ಚರ್ಯಕರ."

"ಈ ಕುರಿತು ನಾನು ಪ್ರತಿಭಟನೆ ಸಲ್ಲಿಸುತ್ತಿರುವೆನಷ್ಟೇ ಅಲ್ಲದೇ ತಾವು ಕೂಡಲೇ ಮಧ್ಯಪ್ರವೇಶಿಸಿ ವಜಾ ಮಾಡಲ್ಪಟ್ಟ ಕಾರ್ಮಿಕರನ್ನು ಪುನರ್ ನೇಮಕಗೊಳಿಸುವಲ್ಲಿ ಕ್ರಮಕೈಗೊಳ್ಳುತ್ತೀರೆಂದು ಆಶಿಸುತ್ತೇನೆ."

●

ಅನ್ನಪೂರ್ಣ ಪೇಪರ್ ಮಿಲ್ ಕಾರ್ಮಿಕರ ಸಭೆ

ಬೆಂಗಳೂರಿನ ಅನ್ನಪೂರ್ಣ ಪೇಪರ್ ಮಿಲ್ ಕಾರ್ಮಿಕರ ಸಭೆ 26-1-82 ರಂದು ಕಾಂ. ಆರ್. ಶ್ರೀನಿವಾಸರ ಅಧ್ಯಕ್ಷತೆಯಲ್ಲಿ ಸೇರಿತ್ತು.

ಈ ಕಾರ್ಖಾನೆಯಲ್ಲಿ ಕಾರ್ಮಿಕರು 5-6 ವರ್ಷಗಳಿಂದಲೂ ಕೆಲಸಮಾಡುತ್ತಿದ್ದರೂ ಕೇವಲ 4 ರೂ. ಸಂಬಳ ಮಾತ್ರ ಪಡೆಯುತ್ತಿದ್ದಾರೆ. ಕನಿಷ್ಠ ಸೌಲಭ್ಯಗಳೂ ಇಲ್ಲ. ಅನೇಕರು ಅಪಘಡದಲ್ಲಿ ಕೈಕಾಲು ಕಳೆದುಕೊಂಡಿದ್ದರೂ ಯಾವುದೇ ಪರಿಹಾರ ದೊರೆತಿಲ್ಲ.

ತಮ್ಮ ಸಮಸ್ಯೆಗಳ ಪರಿಹಾರಕ್ಕೋಸ್ಕರ ಅನ್ನಪೂರ್ಣ ಪೇಪರ್ ಮಿಲ್ ಕಾರ್ಮಿಕರು ಸಿ ಐ ಟಿ.ಯು. ನೇತೃತ್ವದಲ್ಲಿ ಸಂಘಟಿತರಾಗಿದ್ದು ಸಂಘವನ್ನು ರಚಿಸಿಕೊಂಡಿದ್ದಾರೆ.

ಕಾರ್ಮಿಕ ಸಂಘದ ಅಧ್ಯಕ್ಷರಾಗಿ ಕಾಂ. ಟಿ. ಎಸ್. ಅನಂತರಾವ್, ಮಹಬೂಬ್ ಉಪಾಧ್ಯಕ್ಷರಾಗಿ, ಆರ್. ಶ್ರೀನಿವಾಸ್ ಪ್ರಧಾನ ಕಾರ್ಯದರ್ಶಿಯಾಗಿ, ಕಾರ್ಯದರ್ಶಿಯಾಗಿ ಮುನಿರಾಜ, ಖಜಾಂಚಿಯಾಗಿ ಲಿಂಗಪ್ಪ ಆಯ್ಕೆಯಾಗಿದ್ದಾರೆ. ಅಲ್ಲದೇ 12 ಜನರ ಕಾರ್ಯಕಾರೀ ಸಮಿತಿಯನ್ನು ಚುನಾಯಿಸಲಾಗಿದೆ.

●

ರೈತ-ರೈತಕೂಲಿಕಾರರ ಬಹಿರಂಗ ಸಭೆ

ಧಾರವಾಡ ಜಿಲ್ಲೆಯ ಹಾನಗಲ್ ತಾಲ್ಲೂಕು ರೈತಕೂಲಿಗಾರರ ಸಂಘದ ಆಶ್ರಯದಲ್ಲಿ ಹಿರೇಬಾಸೂರು ಗ್ರಾಮದಲ್ಲಿ 30-1-82ರಂದು ರೈತ ಹಾಗೂ ರೈತಕೂಲಿಕಾರರ ಬಹಿರಂಗ ಸಭೆ ನಡೆಯಿತು. ಸಭೆಯ ಅಧ್ಯಕ್ಷತೆಯನ್ನು ಹಿರೇಬಾಸೂರು ಗ್ರಾಮಪಂಚಾಯತಿ ಚೇರ್‌ಮನ್ ಶಿವಪ್ಪ ಬಣಕಾರ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಧಾರವಾಡ ಜಿಲ್ಲಾ ಘಟಕದ ಕಾರ್ಯದರ್ಶಿ ಕಾಂ. ವಿ. ಎನ್. ಹಳಕಟ್ಟಿ ಆಗಮಿಸಿದ್ದರು.

ಆರಂಭದಲ್ಲಿ ಸಭೆಯನ್ನುದ್ದೇಶಿಸಿ ಮಾತನಾಡಿದ ತಾಲ್ಲೂಕು ರೈತಸಂಘದ ಅಧ್ಯಕ್ಷ ಕಾಂ. ಶ್ರೀ ಫಕೀರಪ್ಪ ಹೋತನಹಳ್ಳಿಯವರು, ಹಿರೇಬಾಸೂರು ಮತ್ತು ಸುತ್ತಮುತ್ತಲಿನ ಹಳ್ಳಿಗಳ ರೈತಕೂಲಿಕಾರರು ಭೂಮಿಗಾಗಿ ಹೋರಾಟ ನಡೆಸಿದ್ದನ್ನು ಎತ್ತಿಹೇಳಿ ಈ ಪ್ರದೇಶದ ರೈತಕೂಲಿಕಾರರಿಗೆ ಧೀರೋದಾತ್ತ ಹೋರಾಟದ ಪರಂಪರೆ ಇದೆಯೆಂದರು.

1969ರಲ್ಲಿ ಹಿರೇಬಾಸೂರು, ಕರಿಕಟ್ಟಿ, ಬ್ಯಾತನಾಳ ಮುಂತಾದ ಎಂಟು-ಒಂಬತ್ತು ಹಳ್ಳಿಗಳ ಭೂಹೀನ ರೈತಕೂಲಿಕಾರರು ಭೂಮಿಗಾಗಿ ತೀವ್ರ ಹೋರಾಟ ನಡೆಸಿ ನೂರಾರು ಎಕರೆ ಕೃಷಿಯೋಗ್ಯದಾದ ಸರಕಾರಿ ಪಡಭೂಮಿಯನ್ನು ಸಾಗುವಳಿ ಮಾಡುತ್ತಿದ್ದಾರೆ. ಹಿರೇಬಾಸೂರ ಗ್ರಾಮದಲ್ಲಿ (ಸ. ನಂ. 148) 540 ಎಕರೆ ಉಪ್ಪು ಜಮೀನಿನಲ್ಲಿ ಸುಮಾರು 140 ಎಕರೆ ಜಮೀನಿನಲ್ಲಿ ಸುಮಾರು 80 ಜನ ಕೃಷಿಕೂಲಿಕಾರರು ಸಾಗುವಳಿ ಮಾಡುತ್ತಿದ್ದಾರೆ. ಈ ಕುರಿತು ನಡೆದ ಹೋರಾಟದಲ್ಲಿ ಜೈಲಿಗೂ ಹೋಗಿ ಬಂದಿದ್ದಾರೆ. ಸುಮಾರು 12 ವರ್ಷಗಳಿಂದಲೂ ಸಾಗುವಳಿ ಮಾಡುತ್ತಿದ್ದರೂ ಪಟ್ಟಾ ದೊರೆತಿಲ್ಲ.

ಕಾಂ. ಹಳಕಟ್ಟಿಯವರು ಮಾತನಾಡುತ್ತಾ ಕೃಷಿಯೋಗ್ಯ ಸರಕಾರಿ ಪಡಜಮೀನನ್ನೆಲ್ಲವನ್ನೂ ಹೊಂದಲು ಕೃಷಿಕಾರ್ಮಿಕರು ತೀವ್ರ ಹೋರಾಟ ನಡೆಸಬೇಕೆಂದರು. ಜಿಲ್ಲೆಯಲ್ಲಿ ಸುಮಾರು 31,870 ಎಕರೆ ಬೀಳು ಜಮೀನು ಇದೆ ಎಂದ ಕಾಂ. ಹಳಕಟ್ಟಿ ಈ ಭೂಮಿಯನ್ನು ಪಡೆಯಲು ಐಕ್ಯಹೋರಾಟ ಅವಶ್ಯ ಎಂದರು.

ಉತ್ತರ ಕನ್ನಡ ಜಿಲ್ಲೆಯ ಶಿರ್ಶಿಯ ರೈತನಾಯಕ ಕಾಂ. ಎಂ. ಎಸ್. ಧಾರೇಶ್ವರ ಅವರೂ ಸಭೆಯನ್ನುದ್ದೇಶಿಸಿ ಮಾತನಾಡಿದರು. ರೈತರು, ರೈತಕೂಲಿಕಾರರು ಮತ್ತು ಪಟ್ಟಣದ ಕಾರ್ಮಿಕರು ಜೊತೆಗೂಡಿ ಸೌಹಾರ್ದಯುತ ಹೋರಾಟ ನಡೆಸಬೇಕೆಂದು ತಿಳಿಸಿದ ಕಾಂ. ಧಾರೇಶ್ವರ, ಜ. 19ರಂದು ಭಾರತದಾದ್ಯಂತ ನಡೆದ ಮಹಾಮುಷ್ಕರವನ್ನು ಉದಹರಿಸಿದರು.

ಹಾವೇರಿ ತಾಲ್ಲೂಕು ಕಾಂಗ್ರೆಸ್ (ಎಸ್) ಅಧ್ಯಕ್ಷ ರಾಮಣ್ಣ ಕ್ಷೌರದ, ಕಾರ್ಯದರ್ಶಿ ಎಸ್. ಎಂ. ಕನ್ನಗೌಡರ, ಹಾವೇರಿಯ ಆರ್. ಎಸ್. ಜಾಬಿನ, ಹಾನಗಲ್‌ನ ಮೌಲಾನಾ ಕರ್ನಾಟಕೀ, ಎಂ. ಜಿನ್ನಾ ಮೊದಲಾದವರು ಸಭೆಯನ್ನುದ್ದೇಶಿಸಿ ಮಾತನಾಡಿ ಹೋರಾಟಕ್ಕೆ ಯಶಸ್ಸು ಕೋರಿದರು.

ಕೊನೆಯಲ್ಲಿ ಹಲವಾರು ವರ್ಷಗಳಿಂದ ಸಾಗುವಳಿ ಮಾಡುತ್ತ ಬಂದಿರುವ ಜಮೀನಿಗೆ ಪಟ್ಟಾ ಕೊಡಬೇಕೆಂದು ಸರಕಾರವನ್ನು ಒತ್ತಾಯಿಸಲು ಮಾರ್ಚ್ 1ರಂದು ಹಿರೇಬಾಸೂರಿನಿಂದ ಹಾನಗಲ್‌ವರೆಗೆ ಜಾಥಾ ನಡೆಸಬೇಕೆಂದು ತೀರ್ಮಾನಿಸಲಾಯಿತು.

ಆರಂಭದಲ್ಲಿ ಶಿವನಗೌಡಾ ಪಾಟೀಲರು ಸ್ವಾಗತಿಸಿದರು. ಕೊನೆಯಲ್ಲಿ ಬಾಬುಸಾಬ ಬಾಳೂರು ವಂದಿಸಿದರು.

○

ಬಹಿರಂಗ ಸಭೆ

ಶಿವಮೊಗ್ಗ ಜಿಲ್ಲೆಯ ಸಾಗರದಲ್ಲಿ 1-2-82ರಂದು ಹಮಾಲಿ ಕಾರ್ಮಿಕರ ಮತ್ತು ದಲಿತ ಕೂಲಿಗಾರರ ಸಂಘದ ಆಶ್ರಯದಲ್ಲಿ ಬಹಿರಂಗ ಸಭೆ ನಡೆಯಿತು. ಸಭೆಗೆ ಮುನ್ನ ಕಾರ್ಮಿಕರು ತಮ್ಮ ಬೇಡಿಕೆಗಳ ಈಡೇರಿಕೆಗಾಗಿ, ಮಾಲೀಕರೊಂದಿಗೆ ಶಾಮೀಲಾಗಿರುವ ಸ್ಥಳೀಯ ಲೇಬರ್ ಆಫೀಸರರ ವಿರುದ್ಧ ಬೃಹತ್ ಪ್ರತಿಭಟನಾ ಮೆರವಣಿಗೆ ಹೊರಡಿಸಿದ್ದರು. ಮೆರವಣಿಗೆಯಲ್ಲಿ ನೂರಾರು ಮಹಿಳಾ ಕಾರ್ಮಿಕರೂ ಸೇರಿದಂತೆ ಸುಮಾರು ಸಾವಿರಕ್ಕೂ ಮಿಕ್ಕಿ ಕಾರ್ಮಿಕರು ಪಾಲ್ಗೊಂಡಿದ್ದರು.

ನಂತರ ನಡೆದ ಬಹಿರಂಗ ಸಭೆಯನ್ನುದ್ದೇಶಿಸಿ ಶಿವಮೊಗ್ಗದ ಕಾಂ. ಶಿವಶಂಕರ್, ಸಂಘದ ಅಧ್ಯಕ್ಷ ಎಸ್. ಎಸ್. ನಾಗರಾಜ್, ಕಾರ್ಯದರ್ಶಿ ಶಿವಾನಂದ ಕುಗ್ವೆ, ಸುಬ್ಬಲಕ್ಷ್ಮಮ್ಮ ಮತ್ತಿತರರು ಮಾತನಾಡಿದರು.

ಕೊನೆಯಲ್ಲಿ ಸ್ಥಳೀಯ 'ಸಮುದಾಯ' ಘಟಕದವರು 'ಪತ್ರೆ ಸಂಗಪ್ಪನ ಕೊಲೆ' ನಾಟಕವನ್ನು ಪ್ರದರ್ಶಿಸಿದರು.

○

ಪಕ್ಷ, ಸಂಯುಕ್ತರಂಗ ಹಾಗೂ ಜನತೆ

–ಜ್ಯೋತಿಬಸು

ಪಶ್ಚಿಮ ಬಂಗಾಳದ ಮೂರುದಶಕಗಳ ಹೋರಾಟದ ಅನುಭವ

ಕಳೆದ ನಾಲ್ಕು ವರ್ಷಗಳಲ್ಲಿ ಪಶ್ಚಿಮ ಬಂಗಾಳದ ಎಡರಂಗ ಸರಕಾರ ತನ್ನ ಕಾರ್ಯಕ್ರಮದ ಅನುಷ್ಠಾನದ ಮೂಲಕ ಪಶ್ಚಿಮ ಬಂಗಾಳ ಹಾಗೂ ಭಾರತದ ರಾಜಕೀಯದಲ್ಲಿ ಹೊಸದೊಂದು ಉದಾಹರಣೆ ಪ್ರಸ್ತುತ ಪಡಿಸಿದೆ. ಇಂದು ಎಡರಂಗದ ಅತ್ಯಂತ ಕಟುವಿರೋಧಿಗಳೂ ಈ ಸರಕಾರದ ಚಾರಿತ್ರ್ಯ ಕಾಂಗ್ರೆಸ್ (ಐ) ಆಳ್ವಿಕೆಯ ಸರಕಾರಗಳ ಚಾರಿತ್ರ್ಯಕ್ಕಿಂತ ತೀರಾ ಭಿನ್ನ ರೀತಿಯದ್ದು ಎಂಬುದನ್ನು ಅಲ್ಲಗಳೆಯಲಾರರು.

ಇಲ್ಲಿ, ಧಾರ್ಮಿಕ ಹಾಗೂ ಭಾಷಾ ಅಲ್ಪಸಂಖ್ಯಾತರು ಸುಭದ್ರತೆಯ ಭಾವ ಹೊಂದಿದ್ದಾರೆ, ಕೋಮು ದಂಗೆಗಳಾಗುವುದಿಲ್ಲ, ಸಾಮಾನ್ಯ ಜನರ ಪ್ರಜಾಸತ್ತಾತ್ಮಕ ಹಕ್ಕು ಕಾಪಾಡುವುದರಲ್ಲಿ ಸರಕಾರ ಕಾಳಜಿ ವಹಿಸಿದೆ, ಸರಕಾರದ ಭಾಗೀದಾರರು ಒಗ್ಗಟ್ಟಿನಿಂದ ಕೆಲಸಮಾಡುತ್ತಿದ್ದಾರೆ, ಗುಂಪುಗುಳಿತನ, ಅಶಿಸ್ತು ಹಾಗೂ ಅರಾಜಕತೆಯ ವಿಷ ಸರಕಾರೀ ವ್ಯವಸ್ಥೆಯನ್ನು ಕಲುಷಿತಗೊಳಿಸಿಲ್ಲ. ಜನರ ವಿವಿಧ ಸಂಘಟನೆಗಳೊಂದಿಗೆ ಸರಕಾರ ಸತತ ಸಂಪರ್ಕ ಹೊಂದಿದೆ. ರಾಷ್ಟ್ರೀಯ ರಾಜಕೀಯ ಸಂದರ್ಭದಲ್ಲಿ ಪಶ್ಚಿಮ ಬಂಗಾಳದ ಎಡರಂಗ ಸರಕಾರದ ಈ ವಿಶಿಷ್ಟ ಲಕ್ಷಣಗಳನ್ನು ನಿರ್ಲಕ್ಷಿಸುವುದು ಯಾರಿಗೂ ಸಾಧ್ಯವಿಲ್ಲ.

ಮೂವತ್ತು ವರ್ಷಗಳ ದುಡಿಮೆ

ಇನ್ನೊಂದೆಡೆ, ಸಂವಿಧಾನ ಹಾಗೂ ಆಡಳಿತ ವ್ಯವಸ್ಥೆ ಹೇರಿರುವ ಮಿತಿಗಳೊಳಗೇ ಕಾರ್ಯನಿರ್ವಹಿಸುತ್ತಾ ನಾವು ನಮ್ಮ ಕನಿಷ್ಠ ಕಾರ್ಯಗಳನ್ನು ಎಲ್ಲಾ ವಲಯಗಳಲ್ಲಿ ಅನುಷ್ಠಾನಗೊಳಿಸುತ್ತಾ ಬಂದಿದ್ದೇವೆ. ಜನಸಾಮಾನ್ಯರ ಹೆಚ್ಚೆಚ್ಚು ವಿಭಾಗಗಳು ಬದಲಾವಣೆ ನಡೆದಿವೆ, ಅವು ಒಳ್ಳೆಯದಕ್ಕಾಗೇ ನಡೆದಿವೆ ಎಂಬುದನ್ನು ಕಂಡುಕೊಳ್ಳುತ್ತಿದ್ದಾರೆ. ನಮ್ಮ ಕೆಲಸಗಳ ಮೂಲಕ ರೈತರು, ಭೂಹೀನ ಕೃಷಿಕಾರ್ಮಿಕರು, ಬರ್ಗಾದಾರರು, ಕಾರ್ಮಿಕರು, ವಿದ್ಯಾರ್ಥಿಗಳು, ಯುವಜನರು ಹಾಗೂ ಮಹಿಳೆಯರ ಹಲವು ವಿಭಾಗಗಳ ವಿಶ್ವಾಸಗಳಿಸಿದ್ದೇವೆ ಹಾಗೂ ಕಾರ್ಯಕ್ರಮ ಜಾರಿಗೊಳಿಸುವುದರಲ್ಲಿ ಅವರು ಭಾಗವಹಿಸುವಂತಾಗಿದೆ. ನಾವಿನ್ನು ಬಹಳ ದೂರ ಸಾಗಬೇಕಾಗಿದೆ. ನಮ್ಮ ದೌರ್ಬಲ್ಯ ಹಾಗೂ ತಪ್ಪುಗಳ ಅರಿವು ನಮಗಿದೆ. ಆದರೂ ನಮ್ಮ ಸಾಧನೆಗಳು ಮಹತ್ವದ್ದು ಎಂಬುದಂತೂ ನಿಜ.

ಈ ಯಶಸ್ಸನ್ನು ನಾವೇನು ರಾತ್ರಿ ಬೆಳಗಾಗುವಷ್ಟರಲ್ಲೇ ಗಳಿಸಲಿಲ್ಲ. ಸರಕಾರ ರಚಿಸಲು ಸಾಧ್ಯವಾದದ್ದೂ ಕೇವಲ ಚುನಾವಣಾ ಹೋರಾಟಗಳ ಮೂಲಕ ಮಾತ್ರವೇ ಅಲ್ಲ. ಮೂವತ್ತು ವರ್ಷಗಳ ಹಿಂದೆ, ಐವತ್ತರ ದಶಕದ ಆರಂಭದಲ್ಲಿ ನಮ್ಮದು ತುಂಬಾ ಚಿಕ್ಕ ಪಾರ್ಟಿ, ನಮ್ಮ ಪ್ರಭಾವವೂ ತುಂಬಾ ಸೀಮಿತವಾಗಿತ್ತು. ನಮ್ಮ ವಿರುದ್ಧ ನಡೆಯುತ್ತಿದ್ದ ಒಂದು ಮುಖ್ಯ ಪ್ರಚಾರವೆಂದರೆ ಭಾರತದ ಮಣ್ಣಲ್ಲಿ ನಾವು ಬೇರು ಬಿಟ್ಟಿಲ್ಲ ಎಂಬುದು. ಈ ಪ್ರಚಾರ ಹಲವು ಜನರನ್ನು ಸ್ವಲ್ಪ ಸಮಯ ದಾರಿತಪ್ಪಿಸುವುದರಲ್ಲಿ ಯಶಸ್ವಿಯಾಯಿತು. ಅಲ್ಲದೆ 1946ರ ಕೋಮುದಂಗೆಗಳ ಗಾಯ ಬಹಳ ದಿನಗಳವರೆಗೆ ಜನರ ಮನಸ್ಸಿನಲ್ಲಿ ಹಸಿಯಾಗಿತ್ತು. ಅದು ವರ್ಗ–ಆಧಾರಿತ ಆಂದೋಲನಗಳಿಗೆ ಅಡ್ಡಿಯಾಗಿತ್ತು. ಆದರೆ ಮೂರು ದಶಕಗಳ ಸತತ ಹೋರಾಟ ಹಾಗೂ ಬಲಿದಾನಗಳ ಮೂಲಕ ನಮ್ಮ ಪಕ್ಷ ಇಂದು ರಾಜ್ಯದ ಜನತೆಯ ಸಾಮಾಜಿಕ ಪ್ರಜ್ಞೆಯ ಅವಿಭಾಜ್ಯ ಅಂಗವಾಗಿದೆ.

ಜನಸಾಮಾನ್ಯರ ಈ ಪ್ರೀತಿ-ವಾತ್ಸಲ್ಯಕ್ಕೆ ಕಾರಣ ಪಕ್ಷದ ಕಾರ್ಯಕರ್ತರ ಪ್ರಾಮಾಣಿಕತೆ, ಕಠಿಣ ದುಡಿಮೆ ಹಾಗೂ ಆತ್ಮವಿಶ್ವಾಸ ಮಾತ್ರವಲ್ಲದೆ ಪಕ್ಷದ ಸರಿಯಾದ "ಸಂಯುಕ್ತರಂಗ" ಧೋರಣೆಯೂ ಹೌದು. ನಾವು "ಸಂಯುಕ್ತ ರಂಗ ಕಾರ್ಯನೀತಿ"ಯ ಮಾರ್ಕ್ಸ್‌ವಾದೀ–ಲೆನಿನ್‌ವಾದೀ ಬೋಧನೆಯನ್ನು ಪಶ್ಚಿಮ ಬಂಗಾಳದ ನಿರ್ದಿಷ್ಟ ಪರಿಸ್ಥಿತಿಯಲ್ಲಿ ಅನುಷ್ಠಾನಗೊಳಿಸಲು ಪ್ರಯತ್ನಿಸಿದ್ದೇವೆ. ಈ ರೀತಿ ರಾಜ್ಯದಲ್ಲಿ ನಮ್ಮ ಪಕ್ಷದ ಪ್ರಭಾವವನ್ನು ಅರ್ಥಮಾಡಿಕೊಳ್ಳಬೇಕಾದರೆ ಅದು ಮೂರು ದಶಕಗಳ ಸಂಯುಕ್ತರಂಗ ರಾಜಕೀಯದ ವಿಶ್ಲೇಷಣೆಯ ಹೊರತು ಸಾಧ್ಯವಿಲ್ಲ.

ಪ್ರಮುಖ ಅಂಶ

ಸಂಯುಕ್ತರಂಗ ಧೋರಣೆಯ ಒಂದು ಪ್ರಮುಖ ಅಂಶವೆಂದರೆ ಕೆಲವು ವ್ಯಾಪಕ ಪ್ರಶ್ನೆಗಳ ಮೇಲೆ ಸಾಧ್ಯವಾದಷ್ಟು ಹೆಚ್ಚು ಜನವಿಭಾಗಗಳನ್ನು ಸರಕಾರದ ವಿರುದ್ಧ ಒಗ್ಗೂಡಿಸುವುದು. ಐವತ್ತರ ದಶಕದಲ್ಲಿ ಸುಮಾರಾಗಿ ಪ್ರತೀ ವರ್ಷ ನಾವು ದೊಡ್ಡ ಸಾಮೂಹಿಕ ಆಂದೋಲನಗಳಲ್ಲಿ ಭಾಗವಹಿಸಿದೆವು ಹಾಗೂ ಬೆಂಬಲಿಸಿದೆವು. ಸಾವಿರಾರು ಜನ ಜೈಲು ಸೇರಿದರು, ಲಕ್ಷಾಂತರ ಜನ ಸಭೆ, ಮೆರವಣಿಗೆಗಳಲ್ಲಿ ಭಾಗವಹಿಸಿದರು. ವಿವಿಧ ರಾಜಕೀಯ ಅಭಿಪ್ರಾಯಗಳ ಜನರಿಂದ ನಮಗೆ ಬೆಂಬಲ ದೊರೆಯಿತು. ಆಂದೋಲನದ ಅಂತಿಮ ಹಂತದಲ್ಲಿ ಹಲವು ಸಂದರ್ಭಗಳಲ್ಲಿ ಸರಕಾರ ಪೋಲೀಸ್ ದಮನದ ಮೂಲಕ, ಸಾವಿರಾರು ಜನರನ್ನು ವಿಚಾರಣೆಯಿಲ್ಲದೆ ಬಂಧನದಲ್ಲಿಟ್ಟು, ಸಿಕ್ಕಾಪಟ್ಟೆ ಗುಂಡುಹಾರಿಸಿ, ನಿರ್ದಯ ಕೊಲೆಗಳನ್ನು ನಡೆಸಿ ಆಂದೋಲನವನ್ನು ಹತ್ತಿಕ್ಕಲೆತ್ನಿಸಿತು. ಆದರೆ ಇವೆಲ್ಲಾ ಜನಸಾಮಾನ್ಯರಲ್ಲಿ ಕಾಂಗ್ರೆಸ್ ವಿರೋಧೀ ಭಾವನೆಯನ್ನು ಮತ್ತಷ್ಟು ಹೆಚ್ಚಿಸುವಲ್ಲಷ್ಟೇ ಯಶಸ್ವಿಯಾದವು, ಜನ ನಮ್ಮೆಡೆಗೆ ಬರುವಂತೆ ಮಾಡಿದವು.

1952 ರ ಆಂದೋಲನ ಬರಗಾಲ ಪರಿಸ್ಥಿತಿಯ ವಿರುದ್ಧ, 1953 ರ ಆಂದೋಲನ ಟ್ರಾಮ್‌ದರ ಏರಿಕೆಯ ವಿರುದ್ಧವಾಗಿತ್ತು. 1954 ರಲ್ಲಿ ಶಾಲಾ ಶಿಕ್ಷಕರು ಉತ್ತಮ ವೇತನ ಸೌಲಭ್ಯಗಳಿಗಾಗಿ ಒತ್ತಾಯಿಸಿ ಭಾರೀ ಹೋರಾಟ ನಡೆಸಿ ರಸ್ತೆಗಳ ಮೇಲೆ ಕುಳಿತಾಗ ದುಡಿಯುವ ಜನವಿಭಾಗಗಳೆಲ್ಲಾ ಅವರ ಹೋರಾಟಕ್ಕೆ ಬೆಂಬಲ ನೀಡಿದರು.

1956 ರಲ್ಲಿ ಪಶ್ಚಿಮ ಬಂಗಾಳ ಹಾಗೂ ಬಿಹಾರದ ಯೋಜಿತ ವಿಲೀನದ ವಿರುದ್ಧ, 1958 ರಲ್ಲಿ ಆಹಾರ ಬಿಕ್ಕಟ್ಟಿನಿಂದಾಗಿ ಆಂದೋಲನ ನಡೆಯಿತು. 1960 ರಲ್ಲಿ ಸರಕಾರೀ ನೌಕರರ ಪ್ರಥಮ ಪ್ರಮುಖ ಮುಷ್ಕರ ನಡೆಯಿತು. ಜನರ ಈ ಎಲ್ಲಾ ನ್ಯಾಯಬದ್ಧ ಹೋರಾಟಗಳನ್ನು ನಾವು ಸಂಘಟಿಸಿದೆವು ಅಥವಾ ಬೆಂಬಲಿಸಿದೆವು.

1961 ರಿಂದ 1965 ರ ನಡುವಿನ ಐದು ವರ್ಷಗಳಲ್ಲಿ ಚೀನಾ-ಭಾರತ ಗಡಿ ತಿಕ್ಕಾಟ ಹಾಗೂ ಪಾರ್ಟಿಯೊಳಗಣ ತಿಕ್ಕಾಟದಿಂದಾಗಿ ಯಾವ ಪ್ರಮುಖ ಆಂದೋಲನವನ್ನು ಸಂಘಟಿಸಲಾಗಲಿಲ್ಲ. ಆದರೆ 1966 ರಲ್ಲಿ ಮತ್ತೆ ಪರಿಸ್ಥಿತಿ ಬದಲಾಯಿತು. ಆ ವರ್ಷ ಆಹಾರಕ್ಕಾಗಿ ಹಾಗೂ ರಾಜಕೀಯ ಬಂದಿಗಳ ಬಿಡುಗಡೆಗಾಗಿ ದೊಡ್ಡ ಆಂದೋಲನ ನಡೆಯಿತು. ನಮ್ಮ ಪಕ್ಷ ಈ ಆಂದೋಲನದ ಮುಂಚೂಣಿಯಲ್ಲಿತ್ತು. ಸರಕಾರ ನಮ್ಮೊಡನೆ ಮಾತುಕತೆಗೆ ಬರಬೇಕಾಯಿತು.

ಭಾಗಶಃ ಆಂದೋಲನಗಳು

ಇಂತಹ ವ್ಯಾಪಕ ಆಂದೋಲನಗಳೊಂದಿಗೇ ಕಾರ್ಖಾನೆಗಳಲ್ಲಿ, ಕಚೇರಿಗಳಲ್ಲಿ, ಹಳ್ಳಿಗಳಲ್ಲಿ ಹಾಗೂ ವಿದ್ಯಾಸಂಸ್ಥೆಗಳಲ್ಲಿ ಕೆಲವು ತುರ್ತು ಬೇಡಿಕೆಗಳ ಮೇಲೆ ಭಾಗಶಃ ಹೋರಾಟಗಳನ್ನೂ ನಾವು ಸಂಘಟಿಸಿದೆವು. ಇವುಗಳ ಮೂಲಕ ನಾವು ಸಮಾಜದ ವಿವಿಧ ಭಾಗಗಳ ವಿಶ್ವಾಸಗಳಿಸಿಕೊಳ್ಳಲು ಸಾಧ್ಯವಾಯಿತು ಹಾಗೂ ಅವರೆಲ್ಲಾ ನಮ್ಮ ನೇತೃತ್ವದಲ್ಲಿದ್ದ ಸಾಮೂಹಿಕ ಸಂಘಟನೆಗಳು ತಮ್ಮವೇ ಸಂಘಟನೆಗಳೆಂದು ಭಾವಿಸುವಂತಾಯಿತು. ವ್ಯಾಪಕ ಸಾಮೂಹಿಕ ಚಳವಳಿಗಳು ಈ ಭಾಗಶಃ ಆಂದೋಲನಗಳಿಗೆ ಪೂರಕವಾಗಿದ್ದವು. ಈ ವ್ಯಾಪಕ ಆಂದೋಲನಗಳಲ್ಲಿ ತಕ್ಷಣದ ಆರ್ಥಿಕ ಬೇಡಿಕೆಗಳಿಗಿಂತ ವ್ಯಾಪಕವಾದ ರಾಜಕೀಯ ಪ್ರಶ್ನೆಗಳಿಗೆ ಆದ್ಯತೆ ಕೊಡಲಾಗುತ್ತಿತ್ತು. ಇವು ಒಂದು ಮೇಲಿನ ಹಂತದ ಆಂದೋಲನಗಳು. ಈ ಮೂಲಕ ಜನರ ಪ್ರಜ್ಞೆಯನ್ನು ಹಾಗೂ ಅವರ ಸಮರಶೀಲತೆಯನ್ನು ಎತ್ತರಿಸಲು ಸಾಧ್ಯವಾಯಿತು ಹಾಗೂ ಹೋರಾಟದಲ್ಲಿ ಒಗ್ಗಟ್ಟನ್ನು ಸಾಧಿಸಬೇಕೆಂಬ ದೃಷ್ಟಿಕೋಣ ಮೂಡಿಬಂತು. ಈ ಭಾವನೆಗೆ ರೂಪ ಕೊಡಲು ನಾವು ಪ್ರಯತ್ನಿಸಿದೆವು.

ಈ ಆಂದೋಲನಗಳ ನಾಯಕತ್ವವನ್ನು ಹಲವು ಪಕ್ಷಗಳ ಸಂಯುಕ್ತ ರಂಗಗಳು ವಹಿಸಿದವು. ಆ ಹಂತದಲ್ಲಿ, ನಾವು ಮಾತ್ರ ನಾಯಕತ್ವದಲ್ಲಿ ಉಳಿದಿದ್ದರೆ ಅಷ್ಟೊಂದು ಜನ ನಮ್ಮೊಡನೆ ಸೇರುತ್ತಿರಲಿಲ್ಲ. ಈ ಹಿಂದೆ ನಾನು ಹೇಳಿದಂತೆ, ಐವತ್ತರ ದಶಕದಲ್ಲಿ ಹಲವು ಸ್ತ್ರೀ, ಪುರುಷರು ನಮ್ಮ ಬಗ್ಗೆ ತಪ್ಪುಭಾವನೆ ಹೊಂದಿದ್ದರು, ನಮ್ಮ ಶಕ್ತಿಯ ಬಗ್ಗೆ ಸಂಶಯತಾಳಿದ್ದರು. ದೀರ್ಘಕಾಲದಿಂದ ರೈತರು, ಕಾರ್ಮಿಕರು ಹಾಗೂ ಮಧ್ಯಮ ವರ್ಗಗಳ ನಡುವೆ ನಾವು ಕೆಲಸ ಮಾಡಿದ್ದ ಕ್ಷೇತ್ರಗಳಲ್ಲಿ ಪರಿಸ್ಥಿತಿ ಭಿನ್ನವಾಗಿತ್ತೆಂಬುದು ನಿಜ. ಅಲ್ಲಿ, ಜತೆಗೂಡಿ ಕೆಲಸಮಾಡುವಾಗಿನ ದಿನನಿತ್ಯದ ಅನುಭವಗಳಿಂದಾಗಿ ನಮ್ಮನ್ನು ಅವರು ಅರ್ಥಮಾಡಿಕೊಳ್ಳಲಾರಂಭಿಸಿದರು. ನಮ್ಮ ಯೋಚನೆ ಅಥವಾ ಅಭಿಪ್ರಾಯವನ್ನು ಒಪ್ಪದಿದ್ದಾಗಲೂ ನಮ್ಮ ಸದಸ್ಯರ ಪ್ರಾಮಾಣಿಕತೆ ಹಾಗೂ ಒಂದು ಸಿದ್ಧಾಂತಕ್ಕೆ ಇರುವ ಬದ್ಧತೆಯಿಂದ ಅವರು ಬಹಳ ಪ್ರಭಾವಿತರಾದರು.

1948ರ ಅವಧಿಯಲ್ಲಿ ನಾವು ತಪ್ಪುಮಾಡಿದೆವೆಂದು ಹಲವರು ಯೋಚಿಸಿದ್ದರು. ಆದರೆ ನಾವು ನಮ್ಮ ತಪ್ಪನ್ನು ತಿದ್ದಿಕೊಂಡಾಗ ಅವರಲ್ಲಿ ಹಲವರು ಆದರಿಂದ ಪ್ರಭಾವಿತರಾದರು. ಅವರಿಗೆ ಎಂದೂ ನಮ್ಮ ಪ್ರಾಮಾಣಿಕತೆಯ ಬಗ್ಗೆ ಸಂಶಯ ಬರಲಿಲ್ಲ. ಆದ್ದರಿಂದಲೇ ನಮ್ಮ ಪಕ್ಷ ಕಾನೂನುಸಂಬದ್ಧ ಎಂದು ಉಚ್ಚನ್ಯಾಯಾಲಯ ಘೋಷಿಸಿದ ಕೂಡಲೇ ನಾವು ಜೈಲಿನಿಂದ ಬಿಡುಗಡೆಯಾದ ಕೂಡಲೇ ನಡೆದ 1952ರ ಚುನಾವಣೆಗಳಲ್ಲಿ ಏನೊಂದೂ ತಯಾರಿಯಿಲ್ಲದೆ 28 ಸೀಟು ಪಡೆಯುವುದು ನಮಗೆ ಸಾಧ್ಯವಾಯಿತು.

ನಮ್ಮ ಪಕ್ಷ ಸ್ವಲ್ಪ ಹೆಚ್ಚು ಸಮಯದಿಂದ ಕೆಲಸಮಾಡುತ್ತಿದ್ದ ಕ್ಷೇತ್ರಗಳನ್ನು ಬಿಟ್ಟರೆ ಉಳಿದೆಡೆ ಸಾಮಾನ್ಯವಾಗಿ ನಾವು ಆಗ ಈಗಿನಂತೆ ಜನರ ಪ್ರಜ್ಞೆಯ ಅವಿಭಾಜ್ಯ ಅಂಗವಾಗಿರಲಿಲ್ಲ. ಆದ್ದರಿಂದ ಸಂಯುಕ್ತರಂಗದ ನೇತೃತ್ವದ ಆಂದೋಲನಗಳ ಮೂಲಕ ನಾವು ಇದುವರೆಗೆ ಸಮೀಪಿಸಿರದ ಲಕ್ಷಗಟ್ಟಲೆ ಸಾಮಾನ್ಯ ಜನರ ನಿಕಟ ಸಂಪರ್ಕಕ್ಕೆ ಬಂದೆವು ಮತ್ತು ಈ ಆಂದೋಲನಗಳ ಮೂಲಕ ಅವರು ನಮ್ಮ ಸಂಗಾತಿಗಳನ್ನು ವೈಯಕ್ತಿಕವಾಗಿ ತಿಳಿಯುವಂತಾಗಿ ನಮ್ಮ ಬಗ್ಗೆ ಅವರ ತಪ್ಪು ಭಾವನೆಗಳು, ಹಿಂಜರಿಕೆ ಮಾಯವಾದವು.

(ಮುಂದುವರಿಯುವುದು)

ತಾರತಮ್ಯದ ವಿರುದ್ಧ ಹೋರಾಟ

ಮೈಸೂರು ಪುರಸಭೆ ನಗರಸಮಿತಿಯಾಗಿ ಪರಿವರ್ತನೆಗೊಂಡು ಸುಮಾರು 4 ವರ್ಷಗಳಾಗುತ್ತಾ ಬಂದರೂ ನಾಗರೀಕ ಸೌಲಭ್ಯಗಳು ದಿನೇದಿನೇ ಇಲ್ಲವಾಗುತ್ತಿವೆ. ಸುಮಾರು ಎಂಟು ವರ್ಷಗಳಿಂದಲೂ ನಗರಸಭೆಗೆ ಚುನಾವಣೆ ಇಲ್ಲ.

ನಗರಸಭೆಯಲ್ಲಿ ದುಡಿಯುವ ನೌಕರರಿಗೂ, ಪೌರಕಾರ್ಮಿಕರಿಗೂ ಸರಕಾರಿ ನೌಕರರಿಗೆ ದೊರೆಯುತ್ತಿರುವ ತುಟ್ಟಿಭತ್ತೆ ಮತ್ತಿತರ ಸೌಲಭ್ಯಗಳು ದೊರೆಯುತ್ತಿಲ್ಲ. ವೈದ್ಯಕೀಯ ಮತ್ತು ಚಿಕಿತ್ಸಾಭತ್ಯ ಮತ್ತು 1981 ರಿಂದ ಬರಬೇಕಿರುವ ಎರಡು ಕಂತಿನ ತುಟ್ಟಿಭತ್ಯಗಳನ್ನು ಪಡೆಯಲು ತೀವ್ರತರದ ಹೋರಾಟ ನಡೆಸಬೇಕಾಗಿದೆ. ಕೆಲಸದ ಹೊರೆ ಹೆಚ್ಚಿರುವುದನ್ನು ನಿವಾರಿಸಲು ಹೆಚ್ಚಿಗೆ ಜನರನ್ನು ಕೆಲಸಕ್ಕೆ ನೇಮಿಸಿಕೊಳ್ಳುವುದು, ಹಂಗಾಮಿ ಕೆಲಸಗಾರರನ್ನು ಖಾಯಂಗೊಳಿಸುವುದು, ದಿನಗೂಲಿ ಕೆಲಸಗಾರರ ಕನಿಷ್ಠ ವೇತನ ಹೆಚ್ಚಿಸುವುದು ಮುಂತಾದ ಬೇಡಿಕೆಗಳ ಈಡೇರಿಕೆಗಾಗಿ ಮೈಸೂರು ನಗರಸಭೆ ನೌಕರರು ಮುಂದಾಗಿದ್ದಾರೆ. ಈ ಹೋರಾಟಕ್ಕೆ ಬೆಂಬಲ ನೀಡಬೇಕೆಂದು ಮೈಸೂರು ಸಿಟಿ ಕಾರ್ಪೋರೇಷನ್ ಎಂಪ್ಲಾಯೀಸ್ ಯೂನಿಯನ್‌ನ ಅಧ್ಯಕ್ಷ ಕಾ. ಎಂ. ಎನ್. ಉಗ್ರಪ್ಪ ಮತ್ತು ಪ್ರಧಾನಕಾರ್ಯದರ್ಶಿ ಕಾ. ಸಿ. ಕೆ. ಮೋನ್ ವಿನಂತಿಸಿದರು.

○

-ಎನ್ಕೆ

ಕರ್ನಾಟಕ ರಾಜ್ಯದಲ್ಲಿ

ತಮ್ಮ ಬೇಡಿಕೆಗಳ ಸಲುವಾಗಿ ಸರಕಾರಿ ನೌಕರದಾರರು ಅನಿರ್ದಿಷ್ಟ ಅವಧಿಯ ಮುಷ್ಕರಕ್ಕಾಗಿ ತಯಾರಿ ನಡೆಸುತ್ತಿದ್ದಾಗ ಕೊನೆಗಳಿಗೆಯಲ್ಲಿ. ನಿವೃತ್ತಿ ವಯಸ್ಸು 58 ಆಗಬೇಕೆಂಬ ಬೇಡಿಕೆಯೊಂದನ್ನು ಬಿಟ್ಟು, ಸಂಬಳ ಹೆಚ್ಚಳಕ್ಕಾಗಿ ರೂ. 32ರಿಂದ 36 ಕೋಟಿ ನೀಡಲಾಗುವುದೆಂಬ ಆಶ್ವಾಸನೆಯನ್ನು ಆರ್ಥಿಕ ಮಂತ್ರಿಯವರು ಕೊಟ್ಟನಂತರ. ಒಂದೇ ದಿವಸದ ಸಾಂಕೇತಿಕ ಮುಷ್ಕರದ ಕರೆಕೊಟ್ಟಿರುವುದರಿಂದಾಗಿ ಸರಕಾರಿ ನೌಕರರಲ್ಲಿ ಅಸಮಾಧಾನದ ಹೊಗೆಯಾಡುತ್ತಿದೆ. ಮುಷ್ಕರದ ಒಂದು ದಿವಸದ ಪಗಾರವನ್ನೂ ಸರಕಾರ ಕೊಡಲೊಪ್ಪದ್ದರಿಂದ ನೌಕರರಿಗೆ ಕಸಿವಿಸಿಯಾಗಿದೆ. ಹೋರಾಡಿ, ಮುಷ್ಕರ ಹೂಡಿ ತಮ್ಮ ಬೇಡಿಕೆಗಳನ್ನು ಪಡೆಯುವ ರೂಢಿ, ಪರಂಪರೆ ನಮ್ಮ ರಾಜ್ಯದ ಸರಕಾರಿ ನೌಕರದಾರರಿಗಿಲ್ಲದ್ದರಿಂದ ಒಂದು ದಿವಸದ ಪಗಾರ ಕಳಕೊಂಡಾಗಲೂ ಅಸಮಾಧಾನ ಉಂಟಾಗಿರುವುದು ಸಹಜ.

ಇಂಜಿನಿಯರಿಂಗ್, ಮೆಡಿಕಲ್ ಕಾಲೇಜುಗಳಲ್ಲಿ ರ್‍ಯಾಗಿಂಗ್ ಸಮಸ್ಯೆ ಬೆಳಕುಕಂಡಿದೆ. ದಾವಣಗೆರೆ ಮೆಡಿ

ರ್‍ಯಾಗಿಂಗಿನಿಂದಾಗಿ ಸಾವನ್ನಪ್ಪಿದ ಮಕ್ಕಳಿಗಾಗಿ ಅತ್ತ ತಂದೆತಾಯಿಂದಿರ ಕಣ್ಣೀರು ಕೋಡಿಯಾಗಿ ಹರಿದು ಹೋದದ್ದನ್ನು ಕಂಡ ಬೆಂಗಳೂರಿನ ಮಲ್ಲೇಶ್ವರ ಕ್ಷೇತ್ರದ ಶಾಸಕ ರಘುರಾಂ ದೇವ ಇವರು ನೀರಿಗಾಗಿ ಪರದಾಡುವ ಬೆಂಗಳೂರು ನಗರದ ಮಹಿಳೆಯರ ಕಣ್ಣೀರಿನ ಪ್ರತೀಕವಾಗಿ ನೀರಿನ ಬಿಂದಿಗೆಯೊಂದನ್ನು ಸ್ಪೀಕರಿಗೆ ಅರ್ಪಿಸಿ ಸಮಸ್ಯೆಯತ್ತ ಸರಕಾರದ ಗಮನ ಸೆಳೆಯಲು ಪ್ರಯತ್ನಮಾಡಿದರು. ಮಂತ್ರಿಗಳ ಆಶ್ವಾಸನೆಗಳ ಸುರಿಮಳೆಯೂ, ದಪ್ಪಕ್ಷರದ ಜಾಹೀರಾತುಗಳೂ ಬೆಳ್ಳಿಹಬ್ಬ, ಗಣರಾಜ್ಯೋತ್ಸವದ ಸಂದರ್ಭಗಳಲ್ಲಿ ದಪ್ಪಕ್ಷರಗಳಲ್ಲಿ ಕಾಣಿಸಿಕೊಳ್ಳುತ್ತಿರುವಾಗಲೇ ಬೆಂಗಳೂರು ಮತ್ತಿನ್ನಿತರ ಕಾರ್ಪೊರೇಶನ್, ನಗರ, ಹಳ್ಳಿಗಳ ಜನರು ಹನಿ ನೀರಿಗಾಗಿ ಪರದಾಡುವ ದೃಶ್ಯ ಮಾಯವಾಗಿಲ್ಲ. ಇದರ ಪರಿಹಾರಕ್ಕಾಗಿ ಜನತಾ ಹೋರಾಟ ಅಗತ್ಯ.

ಬೆಂಗಳೂರು ನಾಗರೀಕರ ನೀರಿನ ಸಮಸ್ಯೆ ಪರಿಹಾರಕ್ಕೆ ಕಾವೇರಿ ನೀರಿನ ಯೋಜನೆಯ ಎರಡನೇ ಹಂತದ ಕೆಲಸ ಕಾರ್ಯಗತವಾಗಬೇಕು, ಹುಬ್ಬಳ್ಳಿ-ಧಾರವಾಡಕ್ಕೆ ಮಲಪ್ರಭಾ ಸಮಿತಿಯ ಪ್ರತಿವಾದ. ಸಮರ್ಪಕವಾಗಿ ತೆರಿಗೆ ವಸೂಲಿಯಿಲ್ಲದೆ ಮಾರಾಟ ತೆರಿಗೆಯೊಂದೇ ರೂ. 50 ಕೋಟಿ ಸೋರಿಯಾಗಿದೆಂದೂ, ತೆರಿಗೆ ತಪ್ಪಿಸಿಕೊಳ್ಳುವುದಕ್ಕೆ ಅಧಿಕಾರಿಗಳೇ ಶಾಮೀಲಾಗಿದ್ದಾರೆಂದೂ ಸಾರ್ವಜನಿಕ ಲೆಕ್ಕಪತ್ರ ಸಮಿತಿ ತನ್ನ ವರದಿಯಲ್ಲಿ ತಿಳಿಸಿದೆ. ರಾಜ್ಯದ ಆದಾಯದಲ್ಲಿ ಸೋರಿಹೋಗುತ್ತಿರುವ ಹಣದ ಲೆಕ್ಕವೇ ಇಲ್ಲದಂತಾಗಿದೆ.

ಒಂದೆಡೆ ಆದಾಯದ ರಖಂ ಸರಿಯಾಗಿ ವಸೂಲಿಯಾಗದೆ ಹಾನಿ ತಟ್ಟುತ್ತಿರುವಾಗಲೇ, ವಿವಿಧ ಬಾಬುಗಳಿಗೆ ಆಯವ್ಯಯದಲ್ಲಿ ಹಣ ಒದಗಿಸಿದ್ದು ಪೂರ್ಣವಾಗಿ ವೆಚ್ಚವಾಗದೆ ವ್ಯರ್ಥವಾಗುವಂಥ, ದೋಷಪೂರ್ಣ ಆಯವ್ಯಯ ತಯಾರಿಕೆ ಪದ್ಧತಿಯನ್ನೂ ಸಾರ್ವಜನಿಕ ಲೆಕ್ಕಪತ್ರ ಸಮಿತಿ ತನ್ನ ವರದಿಯಲ್ಲಿ ಟೀಕಿಸಿದೆ. ಪ್ರತಿ ವರ್ಷ ಕೋಟಿಗಟ್ಟಲೆ ಹಣ ವೆಚ್ಚವಾಗದಿರುವ ಪರಿಸ್ಥಿತಿ ಯೋಗ್ಯವಲ್ಲೆಂದು ವಿಶಾದ ವ್ಯಕ್ತಮಾಡಿದೆ ಈ ವರದಿ. ನಗರಾಭಿವೃದ್ಧಿ ಇಲಾಖೆಯಲ್ಲಿ 79ರಲ್ಲಿ ಖರ್ಚಾಗದೆ ಉಳಿದ ಹಣ ರೂ. 84 ಲಕ್ಷದಿಂದ ರೂ. 323 ಲಕ್ಷಗಳಿಗೇರಿದೆ. ಈ ಖಾತೆಗೆ

ಮತ್ತೆ ಅವುಗಳಲ್ಲಿ ಬದಲಾವಣೆ ಮಾಡಲು ಅವಕಾಶ ಮಾಡಿಕೊಡದಿದ್ದರೆ, ಯೋಜನೆಗಳನ್ನು ಸಕಾಲದಲ್ಲಿ ಪೂರ್ತಿಗೊಳಿಸಬಹುದು. ಅದೇ ಸಮಯದಲ್ಲಿ ಯೋಜನೆಗಳಿಗೆ ಬೇಕಾದ ಸಿಮೆಂಟ್, ಉಕ್ಕು ಮತ್ತಿನ್ನಿತರ ಅಗತ್ಯ ವಸ್ತುಗಳ ಪೂರೈಕೆಯ ವ್ಯವಸ್ಥೆಯಾಗುವುದೂ ಅತ್ಯಗತ್ಯ. ಹಾಗಾದರೆ ಮಾತ್ರ ಯೋಜನೆಗಳಿಗಾಗಿ ತೆಗೆದಿಟ್ಟ ಹಣ ಸರಿಯಾಗಿ ವ್ಯಯವಾಗಲು ಸಾಧ್ಯ. ಕೈಗೆತ್ತಿಕೊಂಡ ಯೋಜನೆಗಳು ನಿರ್ದಿಷ್ಟ ಸಮಯದಲ್ಲೇ ಪೂರ್ತಿಗೊಂಡು ಜನರ ಅವಶ್ಯಕತೆಗಳನ್ನು ಪೂರೈಸಲು ಸಾಧ್ಯ.

ಈ ರೀತಿ ನಮ್ಮ ರಾಜ್ಯದ ಜನ ಬೆಲೆಯೇರಿಕೆ, ರ್‍ಯಾಗಿಂಗ್, ನೀರು, ಅಭಿವೃದ್ಧಿ ಕಾರ್ಯ ಮತ್ತಿನ್ನಿತರ ಸಮಸ್ಯೆಗಳನ್ನೆದುರಿಸುತ್ತಿರುವಾಗ, ಕೋಟ್ಯಾವಧಿ ರೂಪಾಯಿ ಖರ್ಚು ಮಾಡಿ ಬಾಹುಬಲಿ ಪ್ರತಿಷ್ಠಾಪನೆಯ ವಿಜೃಂಭಣೆಯ ಮಹೋತ್ಸವ, ಜಾತ್ರೆ ನಡೆಯುತ್ತಿರುವುದನ್ನು ನೋಡುತ್ತಿದ್ದೇವೆ. ಬಂಡವಾಳಶಾಹಿ ನೀತಿಯ, ಭ್ರಷ್ಟ ದುರಾಡಳಿತೆಯ ಕಾರಣ ಜನರ ಜೀವನ ನರಕಸದೃಶವಾಗಿರುವಾಗ, ಅದರ ವಿರುದ್ಧ ಹೋರಾ

ಹಾಲಿಲ್ಲದೆ ಮರಣಶಯ್ಯೆಯಲ್ಲಿರುವಾಗ, ತುಪ್ಪದ ಸುವಾಸನೆಯನ್ನೇ ಅರಿಯದ ಕೋಟ್ಯಾವಧಿ ಜನ ಅರೆಜೀವದಿಂದಿರುವಾಗ, ಎಷ್ಟು ಹಾಲು, ಮೊಸರು, ತುಪ್ಪ, ಕಲ್ಲಿನ ಬಾಹುಬಲಿಯ ತಲೆಯಮೇಲೆ ಸುರಿಯಲಾಗುತ್ತಿದೆ. ಗರೀಬಿಹಟಾವೋ ಸರಕಾರದವರೇ ಮಕ್ಕಳ, ಬಡವರ ಹೊಟ್ಟೆಗೆ ಸೇರತಕ್ಕ ಹಾಲು, ಮೊಸರು, ತುಪ್ಪಗಳನ್ನೆಲ್ಲ ಕಲ್ಲಿನ ಮೇಲೆ ಸುರಿದು ಸಂತೃಪ್ತರಾಗುತ್ತಿದ್ದಾರಲ್ಲ. ಎಂಥ ದುರ್ದೆಸೆ! ಇಂಥ ಮೂಢನಂಬಿಕೆಗಳ ವಿರುದ್ಧ ಹೋರಾಟ ನಡೆಯಬೇಕು. ಮೂಢನಂಬಿಕೆಯೇ ಸುಲಿಯುವವರ್ಗದ, ಭ್ರಷ್ಟ ಸರಕಾರದ, ಇಂದಿರಾಗಾಂಧಿಯ ಬಲ-ಶಕ್ತಿ.

ಬಂಡವಾಳಶಾಹಿವರ್ಗದ ಹಿತರಕ್ಷಿಸುವ ಇಂದಿರಾಗಾಂಧಿಯ ಆಡಳಿತೆಯನ್ನು ಕೊನೆಗೊಳಿಸಬೇಕಾದರೆ ಇಂಥ ಅಂಧಶ್ರದ್ಧೆಯನ್ನು ಜನರ ಮನಸ್ಸಿನಿಂದ ತೆಗೆದುಹಾಕುವುದೂ ಒಂದು ಮಹಾಕರ್ತವ್ಯ. ಆರ್ಥಿಕ ಬೇಡಿಕೆಗಳಿಗಾಗಿ, ರೈತರ ಭೂಮಿಗಾಗಿ, ಶಿಕ್ಷಣ ಪದ್ಧತಿಯ ಬದಲಾವಣೆಗಾಗಿ ಹೋರಾಡುತ್ತಿರುವಾಗಲೇ, ಈ ಮೂಢನಂಬಿಕೆಗಳ ವಿರುದ್ಧವೂ ನಿರ್ದಯ

ಜನರ ಸಮಸ್ಯೆಗಳ ಮಧ್ಯೆ ಎದ್ದುನಿಂತ ಬಾಹುಬಲಿ

ಕಲ್ ಕಾಲೇಜಿನ ವಿದ್ಯಾರ್ಥಿ ಗಣೇಶ ಬಾಬು ಆತ್ಮಹತ್ಯೆ ಮಾಡಿಕೊಂಡು ಈ ಸಮಸ್ಯೆಯತ್ತ ಗಮನಹರಿಸಿದ. ಕಳೆದೆರಡು ವರ್ಷಗಳಿಂದಲೂ ಸುರತ್ಕಲ್ ಮತ್ತಿನ್ನಿತರ ಶಿಕ್ಷಣ ಕೇಂದ್ರಗಳಲ್ಲೂ ರ್‍ಯಾಗಿಂಗಿನಿಂದಾಗಿ ವಿದ್ಯಾರ್ಥಿಗಳು ಸಾವನ್ನಪ್ಪಿದ್ದಾರೆಂದೂ, ವಿದ್ಯಾರ್ಥಿನಿಯರಲ್ಲೂ ಈ ಕೆಟ್ಟ ಚಟ ಪ್ರಚಲಿತವೆಂಬ ಸಂಗತಿಗಳು ಬಯಲಿಗೆ ಬೀಳುತ್ತಿವೆ. ರಾಷ್ಟ್ರಪತಿ ಸಂಜೀವರೆಡ್ಡಿಯವರು ದಿಲ್ಲಿಯಿಂದ ಬೆಂಗಳೂರಿಗೆ ಬಂದು ಕಣ್ಣೀರು ಸುರಿಸಿದಾಗ ಕುಂಭಕರ್ಣ ನಿದ್ರೆಯಲ್ಲಿದ್ದ ಶಿಕ್ಷಣ ಮಂತ್ರಿಯವರು ಎಚ್ಚೆತ್ತು ರ್‍ಯಾಗಿಂಗ್ ಎಂಬ ಸಮಸ್ಯೆಯೊಂದಿದೆಯೆಂಬುದನ್ನು ಮನವರಿಕೆ ಮಾಡಿಕೊಂಡು ಮುಂದಿನ ಕ್ರಮಕೈಕೊಳ್ಳುವ ಆಶ್ವಾಸನೆಯಿತ್ತಿದ್ದಾರೆ. ವಿಧಾನಸಭಾ ಸದಸ್ಯರೂ ಈಗ ತಾನೇ ಎಚ್ಚೆತ್ತು ವಿಧಾನಸಭೆಯಲ್ಲಿ ರ್‍ಯಾಗಿಂಗ್ ಅಂದರೇನೆಂಬುದನ್ನು ವರ್ಣಿಸುವ ಹವ್ಯಾಸ ಕೈಕೊಂಡಿದ್ದಾರೆ. ಇಷ್ಟು ವರ್ಷವಾದರೂ, ತಮ್ಮಲ್ಲಿ ನಡೆಯುತ್ತಿರುವ ಈ ರಾಕ್ಷಸೀ ಹಿಂಸಾಚಾರವನ್ನು ತಡೆಹಿಡಿಯುವ ಉಸಾಬರಿಗೆ ಹೋಗಿಲ್ಲ ಶಿಕ್ಷಣ ಸಂಸ್ಥೆಗಳು, ಆ ಶಿಕ್ಷಣ ಸಂಸ್ಥೆಗಳಲ್ಲಿರುವ ವಿದ್ಯಾರ್ಥಿ ಸಂಘಟನೆಗಳು. ನಾವು ಎಷ್ಟು ಹಿಂದೆ ಬಿದ್ದಿದ್ದೇವೆಂಬುದನ್ನು ಇದು ತೋರಿಸಿಕೊಡುತ್ತದೆ.

ಯೋಜನೆ, ಗುಲ್ಬರ್ಗಕ್ಕೆ ಬೆಣ್ಣೆತೊರಾ ಯೋಜನೆ, ಹಾಗೆಯೇ ಬಿಜಾಪುರ ಜಿಲ್ಲೆಗೆ ಕೃಷ್ಣಾ, ಬೀದರಿಗೆ ಕಾರಂಜ ಹೀಗೆ ಹತ್ತು-ಹಲವಾರು ಯೋಜನೆಗಳಲ್ಲಿ ಹಲವಾರು ವರ್ಷಗಳಿಂದಲೂ ನೆನೆಗುದಿಗೆ ಬಿದ್ದಿವೆ. ಕಾರಣ ಒಂದೇ, ಅದೇನೆಂದರೆ ಹಣವಿಲ್ಲ, ಮಂಜೂರಿಯಿಲ್ಲ. ಮುಖ್ಯಮಂತ್ರಿಯವರ ಹೆಲಿಕಾಪ್ಟರ್ ಪ್ರಯಾಣಕ್ಕೆ ಲಕ್ಷಾವಧಿ ರೂಪಾಯಿ ಖರ್ಚು, ಅನಗತ್ಯ ಅಡಿಗಲ್ಲು ಮತ್ತಿನ್ನಿತರ ಸಮಾರಂಭಗಳಿಗೆ ಅಪಾರ ಖರ್ಚು ನಡೆಯುತ್ತಿರುವಾಗ ಯೋಜನೆಗಳಿಗೆ ಹಣವಿಲ್ಲ. ಸಕಾಲದಲ್ಲಿ ಯೋಜನೆಗಳು ಪೂರ್ತಿಗೊಳ್ಳದೆ, ಯೋಜನೆಗಳಿಗಾಗಿ ಅಂದಾಜು ವೆಚ್ಚ ನೂರು ಪಾಲು ಹೆಚ್ಚು. ರೂ. 56 ಕೋಟಿಯ ಕೃಷ್ಣಾ ಯೋಜನೆಗೆ ಈ ದಿನ ರೂ. 320 ಕೋಟಿ, ಅದು ಪೂರ್ಣಗೊಳ್ಳುವಾಗ ರೂ. 500 ಕೋಟಿಯಾಗಬಹುದು. ಮಲಪ್ರಭಾ ಯೋಜನೆಯ ಖರ್ಚು ಆಗ ರೂ. 36 ಕೋಟಿ, ಈ ದಿನ ಅದು ರೂ. 136 ಕೋಟಿ, ಮುಕ್ತಾಯವಾಗುವಾಗ ಇದರ ಎರಡುಪಟ್ಟು ಹೆಚ್ಚು. ಇದೆಲ್ಲ ನಮ್ಮ ರಾಜ್ಯದ ಯೋಜನೆಗಳ ದುರ್ಧರ ಪರಿಸ್ಥಿತಿ. ಹಣಕಾಸು ಇಲ್ಲ ಎಂದು ಮಂತ್ರಿಗಳ ವಾದ. ಸಾಕಷ್ಟು ಹಣವಿದೆ ಚಿಂತೆ ಬೇಡವೆಂದು ಸಾರ್ವಜನಿಕ ಲೆಕ್ಕಪತ್ರ

ಹೆಚ್ಚುವರಿ ಬೇಡಿಕೆ ರೂಪದಲ್ಲಿ ರೂ. 200 ಲಕ್ಷ ಮಂಜೂರ ಮಾಡಿಸಿಕೊಂಡದ್ದೂ ಖರ್ಚಾಗಿರುವುದಿಲ್ಲ. ಯೋಜನೆಗಳು ಮಂದಗತಿಯಿಂದ ಸಾಗುತ್ತಿರುವುದು ಹಣದ ಅಡಚಣೆಯಿಂದಲ್ಲ, ಅಸಮರ್ಪಕ ಆಡಳಿತೆಯಿಂದ, ಕಂಟ್ರಾಕ್ಟರರಿಂದ ದುಡ್ಡು ತಿನ್ನುವ ಅಭಿಲಾಷೆಯಿಂದ, ದುರಾಡಳಿತೆಯಿಂದ.

ಇದರಂತೆಯೇ ವಸತಿ ಬಾಬಿನಲ್ಲಿ ಬಳಸದೆ ಉಳಿದ ಹಣ 75-76ರಲ್ಲಿ ರೂ. 2.77 ಕೋಟಿ ಇದ್ದದ್ದು 78-79ರಲ್ಲಿ ರೂ. 6 ಕೋಟಿಗೇರಿದೆ. ನಗರ ಹಾಗೂ ಗ್ರಾಮಾಂತರಗಳಲ್ಲಿ ಮನೆಗಳಿಗಾಗಿ ಜನರೆಲ್ಲ ಕಂಗಾಲಾಗಿರುವಾಗ ಮಂಜೂರಾದ ಹಣವನ್ನು ಖರ್ಚುಮಾಡುವುದಕ್ಕೆ ಸರಿಯಾದ ವ್ಯವಸ್ಥೆಮಾಡುವ ಜವಾಬ್ದಾರಿ ಸರಕಾರದ್ದಿದ್ದು, ಇದರಲ್ಲಿ ವಿಫಲರಾಗಿದ್ದಾರೆಂದು ಹೇಳಬೇಕಾಗಿದೆ. ದುರಾಡಳಿತೆ, ಭ್ರಷ್ಟಾಚಾರವೇ ಇದಕ್ಕೂ ಕಾರಣವಲ್ಲದೆ ಮತ್ತೇನಲ್ಲ.

ರಾಜಕೀಯ ಒತ್ತಡಕ್ಕೆ ಬಲಿಯಾಗಿ ಮೇಲಿಂದ ಮೇಲೆ ಯೋಜನೆಗಳಲ್ಲಿ ಬದಲಾವಣೆ ಮಾಡದಿದ್ದರೆ, ಜಾರಿಗೆ ಪೂರ್ಣ ತಯಾರಾದ ಯೋಜನೆಗಳನ್ನಷ್ಟೇ ಅಂದಾಜು ಪತ್ರಿಕೆಯಲ್ಲಿ ಸೇರಿಸಿ, ಕಾರ್ಯಗತವಾಗುತ್ತಿರುವಾಗ

ಟದ ಪ್ರವೃತ್ತಿ ಬೆಳೆಯುತ್ತಿರುವಾಗ, ಜನರ ಲಕ್ಷವನ್ನು ಬೇರೆಡೆಗೆಳೆಯಲು ಸರಕಾರ ಪ್ರಯತ್ನ ಮಾಡುತ್ತಿರುತ್ತದೆ. ಅದಕ್ಕೊಂದು ಉದಾಹರಣೆ ಬಾಹುಬಲಿ ಪ್ರತಿಷ್ಠಾಪನೆಯ ಕಾರ್ಯಕ್ರಮದಲ್ಲಿ ಸರಕಾರದ ನೇರ ಪ್ರವೇಶ. ಲಕ್ಷಾಂತರ ಮಕ್ಕಳು ಒಂದು ಗುಟುಕು

ವಾಗಿ ಚಳುವಳಿ ನಡೆಸಲೇಬೇಕು. ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳು, ಸಾಮೂಹಿಕ ಸಂಘಟನೆಗಳು ಈ ಕೆಲಸಮಾಡಲು ಮುಂದಾಗಬೇಕು.

●

ಸಿ.ಐ.ಟಿ.ಯು.ಗೆ ಸೇರ್ಪಡೆ

ಮೈಸೂರಿನ ಕೆ.ಆರ್.ಎಸ್. ರಸ್ತೆಯಲ್ಲಿರುವ ಎಲ್ಲೈಟ್ ಪ್ರಾಡಕ್ಟ್ಸ್ ಕಾರ್ಮಿಕ ಸಂಘಟನೆಯು ಐ.ಎನ್.ಟಿ.ಯು.ಸಿ. ನೇತೃತ್ವದಲ್ಲಿತ್ತು. ಅಲ್ಲಿನ ಕಾರ್ಮಿಕರು ಈಗ ಸಿ.ಐ.ಟಿ.ಯು. ಸಂಘಟನೆಗೆ ಸೇರಿದ್ದಾರೆ. ತಾ|| 22-1-82ರಂದು ಎಲ್ಲೈಟ್ ಪ್ರಾಡಕ್ಟ್ಸ್ ಎಂಪ್ಲಾಯೀಸ್ ಯೂನಿಯನ್ನಿನ ಸರ್ವಸದಸ್ಯರ ಸಭೆ ಸೇರಿ ಮುಂದಿನ ವರ್ಷಕ್ಕೆ ಯೂನಿಯನ್ನಿನ ಅಧ್ಯಕ್ಷರಾಗಿ ಸಿ.ಐ.ಟಿ.ಯು. ರಾಜ್ಯ ಸಮಿತಿ ಸದಸ್ಯ ಕಾಂ. ಮೋಹನ್ ಕುಮಾರ್‌ರವರನ್ನು ಆಯ್ಕೆಮಾಡಿದ್ದಾರೆ. ಉಳಿದ ಪದಾಧಿಕಾರಿಗಳಾಗಿ ಕೆಳಕಂಡವರು ಆಯ್ಕೆಯಾಗಿದ್ದಾರೆ. ಈರೇಗೌಡ (ಉಪಾಧ್ಯಕ್ಷ), ಪ್ರಧಾನ ಕಾರ್ಯದರ್ಶಿ ಎಂ. ನಾಗರಾಜ್, ಸಂಘಟನಾ ಕಾರ್ಯದರ್ಶಿ ಸ್ವಾಮಿ, ಖಜಾಂಚಿ ಎಂ. ರಾಜು ಮತ್ತು ಹತ್ತು ಜನ ಕಾರ್ಯಕಾರಿ ಸಮಿತಿ ಸದಸ್ಯರು. ಹಿಂದಿನ ಐ.ಎನ್.ಟಿ.ಯು.ಸಿ. ಮುಖಂಡರು ಮಾಡಿದ್ದ ನ್ಯಾಯಬಾಹಿರ ಒಪ್ಪಂದವನ್ನು ರದ್ದುಪಡಿಸಿ, ಹೊಸ ಬೇಡಿಕೆಗಳನ್ನು ಆಡಳಿತ ವರ್ಗದ ಮುಂದಿಡಲು ಸಭೆ ತೀರ್ಮಾನಿಸಿತು.

●

ಬೇರೆಯವರ ನಿಲುಮೆಗಳು ಬದಲಾಗಿವೆಯೇ ಹೊರತು

ಸಿ.ಪಿ.ಐ.(ಎಂ) ನಿಲುಮೆ ಬದಲಾಗಿಲ್ಲ

-ಎಂ. ಕೆ.

ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಹನ್ನೊಂದನೆ ಅಧಿವೇಶನವು 1982 ಜನವರಿ 26 ರಿಂದ 31ರ ತನಕ ಯಶಸ್ವಿಯಾಗಿ ಜರುಗಿತು. ಈ ಅಧಿವೇಶನಕ್ಕೆ ಮೊದಲೂ, ಅಧಿವೇಶನದ ಸಂದರ್ಭದಲ್ಲೂ, ಅಧಿವೇಶನವಾದ ಮೇಲೂ ಸಿ.ಪಿ.ಐ.(ಎಂ)ನ ನಿಲುವಿನಲ್ಲಿ ಬದಲಾಗಿದೆ ಎಂಬ ದೊಡ್ಡ ಪ್ರಚಾರವನ್ನು ಕೆಲವು ಬಂಡವಾಳಶಾಹಿ ಪತ್ರಿಕೆಗಳೂ, ಎಡ ವಿಚಾರಧಾರೆಯನ್ನು ಒಪ್ಪುವವರು ಕೆಲವರೂ ನಡೆಸುತ್ತಾ ಬರುತ್ತಿದ್ದಾರೆ. ಹನ್ನೊಂದನೇ ಅಧಿವೇಶನಕ್ಕೆ ಸಂದೇಶವನ್ನು ಕಳುಹಿಸುವಂತೆ ಕೋರಿ ಸಿ.ಪಿ.ಐ.(ಎಂ) ಸೋವಿಯೆತ್ ರಷಿಯಾದ ಕಮ್ಯೂನಿಸ್ಟ್ ಪಕ್ಷಕ್ಕೆ ಬರೆದು, ಅದರ ಮನ್ನಣೆಗಾಗಿ ಪ್ರಯತ್ನಿಸುತ್ತಿದೆಯೆಂದು ಒಬ್ಬರು ಬರೆದರೆ, ಇನ್ನೊಬ್ಬರು ಸಿ. ಪಿ. ಐ. (ಎಂ) ರಷಿಯಾ ಪರವಾಗಿಬಿಟ್ಟಿದೆ ಎಂದು ಬರೆದಿರುವರು. ಸಿ.ಪಿ.ಐ.(ಎಂ)ನ ಧೋರಣೆಗಳು ಬದಲಾಗಿರುವುದರಿಂದ ಎಡ ಶಕ್ತಿಗಳ ಐಕ್ಯತೆಗೆ ಅನುಕೂಲವಾಗಿದೆ ಎಂದು ಇನ್ನು ಕೆಲವರು ಹೇಳಿರುವರು. ಇನ್ನೂ ಕೆಲವರು ಪಕ್ಷದ ಸಂಘಟನೆಯನ್ನು ಪಸರಿಸಲು ನಿರ್ಣಯಿಸಲಾಗಿದ್ದರೂ ಹಿಂದಿ ಮಾತನಾಡುವ ಪ್ರದೇಶದಲ್ಲಿ ಪಕ್ಷವು ಬೆಳೆದಿಲ್ಲ. ಕೇರಳದ ಅನುಭವದಿಂದಲಾಗಿ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳ ಐಕ್ಯತೆಯ ವಿಚಾರವನ್ನು ಸಿ. ಪಿ. ಐ. (ಎಂ) ಕೈಬಿಡಬಹುದು-ಹೀಗೆ ಏನೇನೋ ಬರೆದಿರುವರು. ಇಂಡಿಯನ್ ಎಕ್ಸ್‌ಪ್ರೆಸ್‌ನಲ್ಲಿ ನಿಹಾಲ್ ಸಿಂಗ್ ಅವರು ಸಿ. ಪಿ. ಐ ಜೊತೆ ಸಿ.ಪಿ.ಐ.(ಎಂ) ಕೂಡಾ ಇಂದಿರಾ ಗಾಂಧಿಯನ್ನು ಬೆಂಬಲಿಸುವತ್ತ ಸಾಗಿದೆ ಎಂಬಂತೆ ಬರೆದಿರುವರು. ಆದರೆ ನಿಜ ಸಂಗತಿ ಏನು?

ಮೊದಲನೆಯದಾಗಿ ತನಗೆ ಯಾವ ಕಮ್ಯೂನಿಸ್ಟ್ ಪಕ್ಷಗಳೊಂದಿಗೆ ಸಂಬಂಧವಿದೆಯೋ ಆ ಕಮ್ಯೂನಿಸ್ಟ್ ಪಕ್ಷಗಳಿಂದ ಮಾತ್ರ ಸಂದೇಶವನ್ನು ಕೋರಿ ಸಿ.ಪಿ.ಐ.(ಎಂ) ಅವುಗಳಿಗೆ ಪತ್ರ ಬರೆದಿದೆ. ಸೋವಿಯೆತ್ ರಷಿಯಾದ ಕಮ್ಯೂನಿಸ್ಟ್ ಪಕ್ಷದೊಂದಿಗಾಗಲೀ, ಚೈನಾದ ಕಮ್ಯೂನಿಸ್ಟ್ ಪಕ್ಷದೊಂದಿಗಾಗಲಿ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷಕ್ಕೆ ಆ ರೀತಿಯ ಸಂಬಂಧವಿಲ್ಲ. ಆದುದರಿಂದ ಹನ್ನೊಂದನೇ ಅಧಿವೇಶನಕ್ಕೆ ಸಂದೇಶ ಕಳುಹಿಸುವಂತೆ ಕೋರಿ ಸಿ.ಪಿ.ಐ.(ಎಂ) ಅವುಗಳಿಗೆ ಪತ್ರ ಬರೆದಿಲ್ಲ. ಸಂದೇಶ ಕಳುಹಿಸುವಂತೆ ಕೋರಿ ಪತ್ರ ಬರೆದ ಕೆಲವು ಕಮ್ಯೂನಿಸ್ಟ್ ಪಕ್ಷಗಳು ಸಂದೇಶವನ್ನು ಕಳುಹಿಸಿವೆ. ಸಿ.ಪಿ.ಐ.(ಎಂ) ರಷಿಯಾದ ಮನ್ನಣೆ ಪಡೆಯಬೇಕೆಂದು ಪ್ರಯತ್ನಿಸಿ ಸಂದೇಶವನ್ನು ಕೋರಿ ಪತ್ರ ಬರೆದಿದೆ ಎಂಬುದು ಅಪ್ಪಟ ಸುಳ್ಳು. ಈ ರೀತಿ ಮಾನ್ಯತೆ ಗಿಟ್ಟಿಸಿಕೊಳ್ಳುವುದು ಸಿ.ಪಿ.ಐ.(ಎಂ) ದಾರಿ ಅಲ್ಲ. ಸೋವಿಯೆತ್ ಕಮ್ಯೂನಿಸ್ಟ್ ಪಕ್ಷ ಮತ್ತು ಚೈನಾ ದೇಶದ ಕಮ್ಯೂನಿಸ್ಟ್ ಪಕ್ಷಗಳೂ ಸೇರಿದಂತೆ ಜಗತ್ತಿನ ಹೆಚ್ಚಿನ ಕಮ್ಯೂನಿಸ್ಟ್ ಪಕ್ಷಗಳು ಸಿ.ಪಿ.ಐ.(ಎಂ)ಗೆ ಮಾನ್ಯತೆ ಕೊಡುವುದಿರಲಿ, ಸಿ.ಪಿ.ಐ.(ಎಂ) ಎಂಬ ಹೆಸರನ್ನೇ ಬಳಸುತ್ತಿರಲಿಲ್ಲ. ಸಿ.ಪಿ.ಐ.(ಎಂ) ಅನ್ನು ಕೆಲವರು ವಿಭಜನಾವಾದಿಗಳು ಮತ್ತು ಸಾಹಸವಾದಿಗಳು ಎಂದರೆ ಇನ್ನು ಕೆಲವರು ಅದು ಆಧುನಿಕ ಪರಿಷ್ಕರಣವಾದಿ ಎಂದೆಲ್ಲಾ ಪ್ರಚಾರ ಮಾಡುತ್ತಾ ಬಂದಿದ್ದರೂ ಮಾರ್ಕ್ಸ್‌ವಾದ-ಲೆನಿನ್‌ವಾದಗಳ ಮೂಲಭೂತ ನಿಯಮಗಳಿಗೆ ಬದ್ಧವಾಗಿ, ಅದನ್ನು ಭಾರತ ದೇಶದ ಪರಿಸ್ಥಿತಿಗೆ ಯಶಸ್ವಿಯಾಗಿ ಅಳವಡಿಸಿಕೊಳ್ಳುತ್ತಾ, ಅಂತರಾಷ್ಟ್ರೀಯ ಕಮ್ಯೂನಿಸ್ಟ್ ಚಳುವಳಿಯ ಐಕ್ಯತೆಯನ್ನು ಪ್ರತಿಪಾದಿಸುತ್ತಾ ಬಂದಿದೆ. ಪರಿಣಾಮವಾಗಿ ಭಾರತ ದೇಶದ ಜನತೆಯಿಂದ ಸಿ.ಪಿ.ಐ.(ಎಂ) ಮನ್ನಣೆ ಪಡೆದಿದೆ. ಆದುದರಿಂದಲೇ ಸಿ. ಪಿ. ಐ. (ಎಂ) ಎಂಬ ಹೆಸರನ್ನೇ ಬಳಸಲು ವಿರೋಧವಿದ್ದ ಜಗತ್ತಿನ ಪ್ರಮುಖ ಕಮ್ಯೂನಿಸ್ಟ್ ಪಕ್ಷಗಳು ಇಂದು ಸಿ. ಪಿ.ಐ. (ಎಂ) ಎಂಬ ಪಕ್ಷವಿದೆ ಎಂದು ಒಪ್ಪಿಕೊಳ್ಳುತ್ತಿದ್ದಾರೆ ಮಾತ್ರವಲ್ಲ ಸಿ. ಪಿ. ಐ.(ಎಂ) ಅನ್ನು ಸಂಪರ್ಕಿಸುತ್ತಿದ್ದಾರೆ. ಇದು ವಾಸ್ತವ ಸಂಗತಿ!

ಸಿ. ಪಿ. ಐ. (ಎಂ) ರಷಿಯಾದತ್ತ ವಾಲಿದೆ ಎಂಬ ದೊಡ್ಡ ಪ್ರಚಾರ ನಡೆಯುತ್ತಿದೆ. ಆದರೆ ಇದು ವಾಸ್ತವಿಕವಲ್ಲ. ಸಿ. ಪಿ. ಐ. (ಎಂ)ನ ನಿಲುಮೆಯಲ್ಲಿ ಬದಲಾಗಿಲ್ಲ. ಬದಲು ಸೋವಿಯೆತ್ ಕಮ್ಯೂನಿಸ್ಟ್ ಪಕ್ಷ ಮತ್ತು ಚೈನಾ ದೇಶದ ಕಮ್ಯೂನಿಸ್ಟ್ ಪಕ್ಷಗಳ ಕೆಲವು ಧೋರಣೆಗಳು ಬದಲಾಗಿವೆ. ಸಿ. ಪಿ. ಐ. (ಎಂ)ನ ಹನ್ನೊಂದನೆಯ ಅಧಿವೇಶನದ ರಾಜಕೀಯ ಗೊತ್ತುವಳಿಯಲ್ಲಿ ಇದನ್ನು ಗುರುತಿಸಲಾಗಿದೆ. ಆದರೆ ಅದೇ ಸಂದರ್ಭದಲ್ಲಿ ಸಮಾಜವಾದಿ ದೇಶಗಳ ಸರಕಾರಗಳ ವಿದೇಶಾಂಗ ನೀತಿ ಸರಿ ಇಲ್ಲ ಎಂಬುದನ್ನೂ ರಾಜಕೀಯ ನಿರ್ಣಯ ಒತ್ತಿ ಹೇಳಿದೆ. ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ದೃಷ್ಟಿಯಲ್ಲಿ ಸಾಮ್ರಾಜ್ಯಶಾಹಿಗಳ ಪ್ರಮುಖ ಅಮೇರಿಕಾ ಸಾಮ್ರಾಜ್ಯಶಾಹಿಯು ಜಗತ್ತಿನ ಮೊದಲ ಶತ್ರು. ಹಿಂದೆ ಚೈನಾ ದೇಶದ ಕಮ್ಯೂನಿಸ್ಟ್ ಪಕ್ಷವು ಇದನ್ನು ಗುರುತಿಸಿ, ಅಮೇರಿಕಾ ಸಾಮ್ರಾಜ್ಯಶಾಹಿಯ ವಿರುದ್ಧ ಸ್ಪಷ್ಟ ನಿಲುಮೆಯನ್ನು ತೆಗೆದುಕೊಂಡಿದ್ದಾಗ ಸಿ. ಪಿ. ಐ. (ಎಂ) ಚೈನಾದ ಕಮ್ಯೂನಿಸ್ಟ್ ಪಕ್ಷದ ನಿಲುಮೆಯನ್ನು ಸಮರ್ಥಿಸಿತು. ಆಗ ಸೋವಿಯೆತ್ ರಷಿಯಾದ ಕಮ್ಯೂನಿಸ್ಟ್ ಪಕ್ಷವು ಅಮೇರಿಕಾ ಸಾಮ್ರಾಜ್ಯಶಾಹಿಯೊಂದಿಗೆ ಶಾಂತಿಯುತ ಸಹಬಾಳ್ವೆ ಮತ್ತು ಶಾಂತಿಯುತ ಪೈಪೋಟಿಯನ್ನು ಪ್ರತಿಪಾದಿಸಿದಾಗ ಸಿ. ಪಿ. ಐ. (ಎಂ) ಅದರ ನಿಲುಮೆಯನ್ನು ವಿರೋಧಿಸಿತು. ಈಗ ಚೈನಾ ದೇಶದ ಕಮ್ಯೂನಿಸ್ಟ್ ಪಕ್ಷವು ತಾನು ಹಿಂದೆ ಹೇಳಿರುವುದಕ್ಕೆ ತೀರಾ ವ್ಯತಿರಿಕ್ತವಾದ, ಸಮಾಜವಾದಿ ಶಕ್ತಿಗಳ ಐಕ್ಯ ಮುನ್ನಡೆಗೆ ಮಾರಕವಾದ ನಿಲುಮೆ, ಅಂದರೆ ಸೋವಿಯೆತ್ ರಷಿಯಾ ಜಗತ್ತಿನ ಮೊದಲ ಶತ್ರು ಎಂದು ನಂಬಿ ಅಮೇರಿಕಾ ಸಾಮ್ರಾಜ್ಯಶಾಹಿಯೊಂದಿಗೆ ಸೇರಿಕೊಂಡು ಸೋವಿಯೆತ್ ರಷಿಯಾವನ್ನು ವಿರೋಧಿಸುವ ನಿಲುಮೆ ತೆಗೆದುಕೊಂಡಿರುವುದನ್ನು ಸಿ. ಪಿ. ಐ. (ಎಂ) ವಿರೋಧಿಸುತ್ತಿದೆ. ಹಾಗೆಯೇ ಸೋವಿಯೆತ್ ರಷಿಯಾದ ಕಮ್ಯೂನಿಸ್ಟ್ ಪಕ್ಷವು ಅಮೇರಿಕಾ ಸಾಮ್ರಾಜ್ಯಶಾಹಿ ವಿರುದ್ಧ ಹೆಚ್ಚು ಹೆಚ್ಚು ಸ್ಪಷ್ಟವಾದ ನಿಲುಮೆ ವಹಿಸುತ್ತಿರುವುದನ್ನು ಸಿ. ಪಿ. ಐ. (ಎಂ) ಸ್ವಾಗತಿಸಿದೆ. ಅಂದರೆ ಬದಲಾದುದು ಸಿ. ಪಿ. ಐ. (ಎಂ)ನ ನಿಲುಮೆಯಲ್ಲ.

ಕಳೆದ ನಾಲ್ಕೈದು ವರ್ಷಗಳಲ್ಲಿನ ಪ್ರಮುಖ ಬದಲಾವಣೆಗಳನ್ನು ಗುರುತಿಸಿದಾಕ್ಷಣ ಸಿ. ಪಿ. ಐ. (ಎಂ) ಚೈನಾ ವಿರೋಧಿ ಮತ್ತು ರಷಿಯಾ ಪರ ಎಂದು ಆಗುವುದಿಲ್ಲ. ಸಿ. ಪಿ. ಐ. (ಎಂ) ಚೈನಾ ವಿರೋಧಿಯೂ ಅಲ್ಲ, ರಷಿಯಾ ವಿರೋಧಿಯೂ ಅಲ್ಲ; ಹಾಗೆಯೇ ಸಿ. ಪಿ. ಐ. (ಎಂ) ಚೈನಾ ಪರವೂ ಅಲ್ಲ, ರಷಿಯಾ ಪರವೂ ಅಲ್ಲ. ಪರಸ್ಪರ ಸಮಾನತೆಯ ಆಧಾರ ಮತ್ತು ಪರಸ್ಪರ ಟೀಕೆ ಮಾಡುವ ಹಕ್ಕನ್ನು ಉಳಿಸಿಕೊಂಡು, ಎಲ್ಲ ಕಮ್ಯೂನಿಸ್ಟ್ ಪಕ್ಷಗಳ ಐಕ್ಯತೆ ಬೆಳೆಯಬೇಕೆಂಬುದು ಸಿ. ಪಿ. ಐ. (ಎಂ)ನ ಆಶಯ. ಸಮಾಜವಾದಿ ದೇಶಗಳಲ್ಲಿನ ಕೆಲವು ನಿಲುಮೆಗಳು ಸಿ. ಪಿ. ಐ. (ಎಂ) ದೃಷ್ಟಿಯಲ್ಲಿ ತಪ್ಪೆಂದು ತೋರಿದರೂ, ಕೆಲವರು ವಾದಿಸುವಂತೆ ಸಮಾಜವಾದಿ ದೇಶಗಳಲ್ಲಿ ಸಮಾಜವಾದಿ ವ್ಯವಸ್ಥೆಯೇ ಇಲ್ಲ ಎಂದು ಸಿ. ಪಿ. ಐ. (ಎಂ) ಒಪ್ಪುವುದಿಲ್ಲ. ಆಡಳಿತ ನಡೆಸುವ ಯಾವುದೇ ಕಮ್ಯೂನಿಸ್ಟ್ ಪಕ್ಷವನ್ನು ಟೀಕಿಸುವಾಗ ಈ ಅಂಶವನ್ನು ಸಿ. ಪಿ. ಐ. (ಎಂ) ಗಮನದಲ್ಲಿಡುತ್ತದೆ. ಒಂದು ರಾಷ್ಟ್ರದಲ್ಲಿ "ಉತ್ಪಾದನಾ ಸಾಧನಗಳು ಸಮಾಜೀಕರಣವಾಗಿದ್ದು, ವಿತರಣೆಯೂ ಸಮಾಜೀಕರಣವಾಗಿದ್ದರೆ" ಅಲ್ಲಿ ಸಮಾಜವಾದಿ ತಳಹದಿ ಇದೆಯೆಂದೂ, ಅದನ್ನು ಬಲಗೊಳಿಸಲು ಮಾರ್ಕ್ಸ್‌ವಾದಿ-ಲೆನಿನ್‌ವಾದಿ ನಿಯಮಗಳ ಆಧಾರದಲ್ಲಿ ಮುನ್ನಡೆಯಬೇಕೆಂದೂ ಸಿ. ಪಿ. ಐ. (ಎಂ) ನಂಬುತ್ತದೆ. ಹೀಗೆ ಮುನ್ನಡೆಯುವಾಗ ಕೆಲವು ತಪ್ಪುಗಳು ಆಗುವುದೂ ಸಹಜವಿದೆ. ಅದನ್ನು ಗುರುತಿಸಿ, ತಿದ್ದಿಕೊಳ್ಳುವುದು ಕಮ್ಯೂನಿಸ್ಟರ ಕೆಲಸದ ವಿಧಾನವಾಗಿದೆ.

ಒಂದಾಗಿದ್ದ ಕಮ್ಯೂನಿಸ್ಟ್ ಪಕ್ಷವು ಎರಡಾಗಿ ಸಿ. ಪಿ. ಐ. (ಎಂ) ಹುಟ್ಟಿದಾಗಿನಿಂದ ಸಿ. ಪಿ. ಐ. (ಎಂ) ಚೈನಾ ಪರ ಎಂಬ ಪ್ರಚಾರ ಸಾಕಷ್ಟು ದೊಡ್ಡ ಪ್ರಮಾಣದಲ್ಲಿ ನಡೆದಿತ್ತು. ಈಗ ಸೋವಿಯೆತ್ ರಷಿಯಾದ ಕಮ್ಯೂನಿಸ್ಟ್ ಪಕ್ಷದ ಕೆಲವು ನಿಲುಮೆಗಳು ಸರಿಯಾಗಿದೆ ಎಂದು ಗುರುತಿಸಿ, ಚೈನಾ ಕಮ್ಯೂನಿಸ್ಟ್ ಪಕ್ಷದ ನಿಲುಮೆಗಳು ತಪ್ಪಿವೆ ಎಂದಾಕ್ಷಣ ಸಿ. ಪಿ. ಐ. (ಎಂ) ರಷಿಯಾ ಪರವಾಗಿ ಬಿಟ್ಟಿದೆ ಎಂಬ ಪ್ರಚಾರ ದೊಡ್ಡ ರೀತಿಯಲ್ಲಿ ನಡೆದಿದೆ. ಇದು ಸರಿ ಅಲ್ಲ. ಕೆಲವೊಂದು ಬದಲಾವಣೆಗಳು ಆಗಿದ್ದುದನ್ನು ಗುರುತಿಸಿದಾಕ್ಷಣ, ಎಲ್ಲವೂ ಬದಲಾಗಿದೆ ಎಂದು ಹೇಳಿದಂತಾಗುವುದಿಲ್ಲ. ಸಮಾಜವಾದಿ ದೇಶಗಳಲ್ಲಿ ಆಳುವ ಕಮ್ಯೂನಿಸ್ಟ್ ಪಕ್ಷಗಳ ವಿದೇಶಾಂಗ ನೀತಿಯಲ್ಲಿರುವ ತಪ್ಪುಗಳನ್ನು ಹನ್ನೊಂದನೆ ಅಧಿವೇಶನವು ಮತ್ತೊಮ್ಮೆ ಒತ್ತಿ ಹೇಳಿದೆ. "ಬೆಳವಣಿಗೆ ಆಗದಿರುವ ಅಥವಾ ಈಗ ಬೆಳವಣಿಗೆ ಆಗುತ್ತಿರುವ ದೇಶಗಳ ಮಿತ್ರ ಸರಕಾರಗಳ ಮೇಲೆ ಹೆಚ್ಚು ನಂಬಿಕೆ ಇಟ್ಟು, ಈ ದೇಶಗಳ ಕ್ರಾಂತಿಕಾರಿ ಶಕ್ತಿಗಳನ್ನು ಸಮಾಜವಾದಿ ರಾಷ್ಟ್ರಗಳ ಆಳುವ ಕಮ್ಯೂನಿಸ್ಟ್ ಪಕ್ಷಗಳು ಕಡೆಗಣಿಸುತ್ತಿವೆ. ಈ ದೇಶಗಳ ಕೆಲವು ಸರಕಾರಗಳು ಅತ್ಯಂತ ಪ್ರತಿಗಾಮಿ ಧೋರಣೆಗಳನ್ನು ಅನುಸರಿಸಿ ಜನತೆಯನ್ನು ದಮನ ಮಾಡುತ್ತಿದ್ದರೂ, ಅಂತಹ ಸರಕಾರಗಳನ್ನು ಸಮಾಜವಾದಿ ರಾಷ್ಟ್ರಗಳ ಪತ್ರಿಕೆಗಳಲ್ಲಿ ಹೊಗಳಿ ಕೊಂಡಾಡುತ್ತಿದ್ದಾರೆ. ಕಾರ್ಮಿಕವರ್ಗದ ಮತ್ತು ಜನತೆಯ ಮೇಲೆ ನಡೆಯುವ ಶೋಷಣೆ ದಬ್ಬಾಳಿಕೆಗಳನ್ನು ಸಮಾಜವಾದಿ ರಾಷ್ಟ್ರಗಳಲ್ಲಿ ಹೇಳುವುದೇ ಇಲ್ಲ. ಸಮಾಜವಾದಿ ರಾಷ್ಟ್ರಗಳಲ್ಲಿನ ಕಾರ್ಮಿಕ ವರ್ಗಕ್ಕೆ ಈ ದೇಶಗಳ ಕಾರ್ಮಿಕರು ಮತ್ತು ಶೋಷಣೆಗೊಳಗಾದ ಜನ ನಡೆಸುವ ಹೋರಾಟಗಳ ಪರಿವೆಯೇ ಇಲ್ಲ. ಕಾರ್ಮಿಕವರ್ಗದ ಅಂತರಾಷ್ಟ್ರೀಯತೆಯ ಆಧಾರದಲ್ಲಿ ಸೌಹಾರ್ದ ಕಾರ್ಯಕ್ರಮಗಳೂ ಸಮಾಜವಾದಿ ರಾಷ್ಟ್ರಗಳ ಕಾರ್ಮಿಕ ವರ್ಗದಿಂದ ಈ ಕಾರಣಗಳಿಂದಲಾಗಿ ಬರುತ್ತಿಲ್ಲ......" ಈ ಮೇಲೆ ಹೇಳಿದವುಗಳಿಂದ ಸಿ. ಪಿ. ಐ. (ಎಂ)ನ ನಿಲುಮೆಯು ಸ್ಪಷ್ಟವಾಗುತ್ತದೆ. ಸೋವಿಯೆತ್ ರಷಿಯಾದ ಕಮ್ಯೂನಿಸ್ಟ್ ಪಕ್ಷ ಮತ್ತು ಚೈನಾ ದೇಶದ ಕಮ್ಯೂನಿಸ್ಟ್ ಪಕ್ಷಗಳ ವಿದೇಶಾಂಗ ನೀತಿಯನ್ನು ನೋಡಿದಲ್ಲಿ, ಈ ತಪ್ಪು ಮುಂದುವರಿಯುತ್ತಿರುವುದು ಕಂಡುಬರುತ್ತಿದೆ. ಜಗತ್ತಿನ ಕಮ್ಯೂನಿಸ್ಟ್ ಚಳುವಳಿಯ ಐಕ್ಯತೆಯನ್ನು, ಸಮಾಜವಾದಿ ರಾಷ್ಟ್ರಗಳ ಒಗ್ಗಟ್ಟನ್ನೂ ಪ್ರತಿಪಾದಿಸುವ ಸಿ. ಪಿ. ಐ. (ಎಂ), ಈ ಮೇಲೆ ಹೇಳಿರುವ ದೋಷ ಮತ್ತು ನಿಶ್ಶಕ್ತಿಗಳನ್ನು ಹೋಗಲಾಡಿಸಿ ಕಾರ್ಮಿಕವರ್ಗದ ಅಂತರಾಷ್ಟ್ರೀಯತೆಯ ಆಧಾರದಲ್ಲಿ ಸಮಾಜವಾದಿ ಶಕ್ತಿಗಳೆಲ್ಲಾ ಒಂದಾಗುವವೆಂದು ಆಶಿಸುತ್ತದೆ.

"ಸಿ.ಪಿ.ಐ.(ಎಂ) ಶಾಂತಿಯ ಪಕ್ಷಪಾತಿ ಮತ್ತು ಯುದ್ಧದ ವಿರೋಧಿ". ಇಂದು ಸಾಮ್ರಾಜ್ಯಶಾಹಿ ಶಕ್ತಿಗಳು ಯುದ್ಧದ ಭಯವನ್ನು ಹೆಚ್ಚಿಸುತ್ತಿರುವ ಸಂದರ್ಭ ಶಾಂತಿ ರಕ್ಷಣೆಗಾಗಿ ಹೋರಾಡುವುದು ತುರ್ತಿನ ಕೆಲಸವೆಂದು ಸಿ.ಪಿ.ಐ.(ಎಂ) ನಂಬುತ್ತದೆ. ಭಾರತ ದೇಶದ ಸರಕಾರವು ಸಾಮ್ರಾಜ್ಯಶಾಹಿ ವಿರುದ್ಧದ ನಿಲುಮೆಯನ್ನು ತೆಗೆದುಕೊಂಡಾಗಲೆಲ್ಲಾ ಅದನ್ನು ಸಿ.ಪಿ.ಐ.(ಎಂ) ಸಮರ್ಥಿಸುತ್ತದೆ. ಭಾರತ ದೇಶದಲ್ಲಿ ಇಂದು ಆಡಳಿತ ನಡೆಸುತ್ತಿರುವ ಇಂದಿರಾ ಕಾಂಗ್ರೆಸ್ ಸರಕಾರವು ವಿದೇಶಾಂಗ ನೀತಿಯ ಕೆಲವು ವಿಚಾರಗಳಲ್ಲಿ ಸರಿಯಾದ ನಿಲುಮೆ ತೆಗೆದುಕೊಳ್ಳುತ್ತಿದೆ ಎಂದಾಕ್ಷಣ ಈ ಸರಕಾರವು ಜನಪರವಾಗಿದೆ ಅಥವಾ ಪ್ರಗತಿಶೀಲವಾಗಿದೆ ಎಂದರ್ಥವಲ್ಲ. ತಾನು ಪ್ರತಿನಿಧೀಕರಿಸುವ ಬಂಡವಾಳಶಾಹಿ ವರ್ಗಗಳ ಹಿತದೃಷ್ಟಿಯಿಂದಲೇ ಇಂದಿರಾ ಸರಕಾರವು ಹಲವೊಮ್ಮೆ ಸಾಮ್ರಾಜ್ಯಶಾಹಿ ನಿಲುಮೆಯನ್ನು ತಳೆಯಬೇಕಾಗುತ್ತದೆ. ಸಾಮ್ರಾಜ್ಯಶಾಹಿಯ ವಿರುದ್ಧ ಹೋರಾಟ ಎಲ್ಲ ಜನತೆಯ ಹೋರಾಟವಾದುದರಿಂದಲೇ ಮತ್ತು ಸಾಮ್ರಾಜ್ಯಶಾಹಿ ವಿರುದ್ಧದ ಹೋರಾಟವನ್ನು ಬಲಗೊಳಿಸುವುದಕ್ಕೆ ಸಹಾಯವಾಗುವುದರಿಂದಲೇ ಭಾರತ ದೇಶದ ಸರಕಾರವು ಸಾಮ್ರಾಜ್ಯಶಾಹಿ ವಿರುದ್ಧ ನಿಲುಮೆ ತಳೆದಾಗಲೆಲ್ಲಾ ನಾವು ಬೆಂಬಲಿಸಲೇ ಬೇಕು. ಆಳುವ ಸರಕಾರದ ದ್ವಿಮುಖ ಧೋರಣೆಯನ್ನು, ಅದರಲ್ಲಿರುವ ಚಂಚಲತೆಯನ್ನು ಅದೇ ಸಂದರ್ಭದಲ್ಲಿ ವಿರೋಧಿಸಲೇಬೇಕು. ಸಾಮ್ರಾಜ್ಯಶಾಹಿ ವಿರುದ್ಧದ ಹೋರಾಟದಲ್ಲಿ ದುಡಿಯುವ ವರ್ಗವನ್ನು, ಜನತೆಯನ್ನು ಪಾಲ್ಗೊಳ್ಳಿಸದಿದ್ದಲ್ಲಿ, ಹೋರಾಟ ಸಫಲವಾಗದು ಎಂದೂ ಸಿ. ಪಿ. ಐ. (ಎಂ) ನಂಬುತ್ತದೆ. ಆದುದರಿಂದ ಸಿ.ಪಿ. ಐ.(ಎಂ) ಇಂದಿರಾ ಕಾಂಗ್ರೆಸ್ ಸರಕಾರಕ್ಕೆ ಬೆಂಬಲವೀಯುವತ್ತ ವಾಲುತ್ತಿದೆ ಎಂಬ ಮಾತು ಸತ್ಯಕ್ಕೆ ದೂರ; ಇಂದಿರಾ ಸರಕಾರದ ವಿರುದ್ಧ ಬೆಳೆದು ಬರುತ್ತಿರುವ ಕಾರ್ಮಿಕವರ್ಗದ ಮತ್ತು ಜನತೆಯ ಹೋರಾಟಗಳ ಮುಂಚೂಣಿಯಲ್ಲಿ ಸಿ. ಪಿ. ಐ. (ಎಂ) ಇದೆ ಮತ್ತು ಸಿ.ಪಿ.ಐ.(ಎಂ)ನ ಮೇಲೆಯೇ

(6ನೇ ಪುಟ ನೋಡಿ)

ಸಿ.ಪಿ.ಐ.(ಎಂ) ನಿಲುವು ಬದಲಾಗಿಲ್ಲ

(5ನೇ ಪುಟದಿಂದ)

ಇಂದಿರಾಗಾಂಧಿಯವರ ಆಕ್ರೋಶ ಇದೆ ಎಂಬುದನ್ನು ಮರೆಮಾಚಲು ನಡೆಸುವ ಸುಳ್ಳು ಪ್ರಚಾರ ಇದಾಗಿದೆ.

ನಿಹಾಲ್ ಸಿಂಗ್ ಅವರು ಇಂಡಿಯನ್ ಎಕ್ಸ್‌ಪ್ರೆಸ್ (ಕನ್ನಡಪ್ರಭದಲ್ಲೂ ಅಚ್ಚಾಗಿದೆ)ನಲ್ಲಿ ಬರೆದಿರುವಂತೆ "ಭಾ.ಜ.ಪ.ವನ್ನು ವಿರೋಧಿಸಲು ಇಂದಿರಾಗಾಂಧಿಗೆ ಬೆಂಬಲ ಕೊಡುವಂತೆ ಸಿ. ಪಿ. ಐ. (ಎಂ)ಗೆ ಸೋವಿಯೆತ್ ಕಮ್ಯುನಿಸ್ಟ್ ಪಕ್ಷ ಹೇಳಬಹುದು...... ವಿಜಯವಾಡ ಅಧಿವೇಶನವಾದ ಮೇಲೆ ಸಿ.ಪಿ.ಐ.(ಎಂ) ಪ್ರತಿಷ್ಠೆಗೆ ಧಕ್ಕೆಯಾಗಿದೆ......" ಹೀಗೆಲ್ಲಾ ಬರೆದಿರುವುದು ಸತ್ಯವನ್ನು ಮುಚ್ಚಿಡಲು ಮತ್ತು ಸಿ.ಪಿ.ಐ.(ಎಂ) ಪತ್ತ ನೋಡುತ್ತಿರುವ ಜನತೆಯನ್ನು ಗೊಂದಲಕ್ಕೀಡು ಮಾಡುವ ಉದ್ದೇಶದಿಂದ ಕೂಡಿದೆ. ವಾಸ್ತವಿಕವಾಗಿ ಸಿ.ಪಿ.ಐ.(ಎಂ) ಮತ್ತು ಇತರೆ ಎಡಶಕ್ತಿಗಳೂ, ವರ್ಗ ಮತ್ತು ಜನ ಹೋರಾಟಗಳೂ ಬೆಳೆದಂತೆಲ್ಲಾ ಕಾಂಗ್ರೆಸ್ (ಐ), ಭಾ.ಜ.ಪ.ಗಳು ಒಂದಾಗುತ್ತವೆ. ಏಕೆಂದರೆ ಅವುಗಳ ವರ್ಗಗುಣ ಮೂಲಭೂತವಾಗಿ ಒಂದೇ ಆಗಿದೆ. ಕೇರಳದಲ್ಲಿ ಆರ್.ಎಸ್.ಎಸ್. ಮತ್ತು ಕಾಂಗ್ರೆಸ್‌ನವರು ಒಂದಾಗಿ ಎಡ ಪ್ರಜಾಪ್ರಭುತ್ವ ರಂಗ ಸರಕಾರದ ಮೇಲೆ ನಡೆಸಿದ ಧಾಳಿಯಿಂದಲೇ ಇದು ವ್ಯಕ್ತ. ರಾಷ್ಟ್ರೀಯವಾಗಿಯೂ, ಅಂತರಾಷ್ಟ್ರೀಯವಾಗಿಯೂ ಪರಿಷ್ಕರಣವಾದ ಮತ್ತು ಎಡ ಪಂಥವಾದಗಳ ವಿರುದ್ಧ ಹೋರಾಟ ಮಾಡುತ್ತಾ ಬಂದಿದ್ದು, ತನ್ನ ಸ್ವತಂತ್ರ ಧೋರಣೆಗಳ ಆಧಾರದಲ್ಲಿ ಮುಂದುವರಿಯುತ್ತಾ ಬಂದಿರುವ ಸಿ.ಪಿ.ಐ.(ಎಂ) ಸೋವಿಯೆತ್ ರಷಿಯಾದವರು ಅಥವಾ ಚೈನಾದವರು ಹೇಳಿದಂತೆ ಮಾಡುವ ಪಕ್ಷವಲ್ಲ. ವಾಸ್ತವಿಕತೆಯನ್ನು ಗುರುತಿಸಿ, ಮಾರ್ಕ್ಸ್‌ವಾದ-ಲೆನಿನ್‌ವಾದಗಳ ಆಧಾರದಲ್ಲಿ ಆಳುವವರ್ಗಗಳ ವಿರುದ್ಧ ವರ್ಗ ಹೋರಾಟ ಮತ್ತು ಜನ ಹೋರಾಟಗಳನ್ನು ಬೆಳೆಸುವುದು, ಅದರೊಂದಿಗೆ ಕಾರ್ಮಿಕವರ್ಗದ ಅಂತರಾಷ್ಟ್ರೀಯತೆಯ ಆಧಾರಿತವಾಗಿಯೂ ಬದಲಾದ ಪರಿಸ್ಥಿತಿಯನ್ನು ಗುರುತಿಸಿ ಸಮಾನತೆಯ ಆಧಾರದಲ್ಲಿ ಕಮ್ಯುನಿಸ್ಟ್ ಪಕ್ಷಗಳು ಜಗತ್ತಿನಾದ್ಯಂತ ಒಗ್ಗಟ್ಟಾಗಬೇಕೆಂಬುದೇ ಸಿ.ಪಿ.ಐ.(ಎಂ)ನ ನಿಲುವು.

ಪಕ್ಷದ ವಿಸ್ತರಣೆಯ ಕುರಿತು ಒಂದೆರಡು ಮಾತು. ಕಳೆದ ಮೂರು ನಾಲ್ಕು ವರ್ಷಗಳಲ್ಲಿ ಪಕ್ಷದ ಸಂಘಟನೆಯು ಇರುವ ಪ್ರದೇಶಗಳಲ್ಲಿ ಬಲಗೊಂಡು, ಇರದೆ ಇದ್ದ ಪ್ರದೇಶಗಳಿಗೆ ಪಸರಿಸಿರುವುದು ಮತ್ತು ಇರುವ ಸಂಘಟನೆಗಳನ್ನು ಬಲಪಡಿಸಿ ಹೊಸ ವಿಭಾಗಗಳನ್ನು ಸಂಘಟಿಸುವುದು-ಈ ಎರಡು ದೃಷ್ಟಿಯಿಂದಲೂ ವಿಜಯವಾಡದಲ್ಲಿ ಜರುಗಿದ ಹನ್ನೊಂದನೇ ಅಧಿವೇಶನವು ಮುನ್ನಡೆಯ ಪ್ರತೀಕವಾಗಿದೆ. 1981 ಸೆಪ್ಟೆಂಬರ್ 15 ರಂದು ನವದೆಹಲಿಯಲ್ಲಿ ಸೇರಿದ್ದ ವಿದ್ಯಾರ್ಥಿ ಯುವಜನರ ಬೃಹತ್ ಪ್ರದರ್ಶನಕ್ಕೆ ಹಿಂದಿ ಮಾತನಾಡುವ ರಾಜ್ಯಗಳಿಂದ ಪ್ರತಿ ಒಂದು ರಾಜ್ಯದಿಂದ ಕನಿಷ್ಟ 5000ದಷ್ಟು ವಿದ್ಯಾರ್ಥಿ ಯುವಜನರನ್ನು ಕಳುಹಿಸಲು ಸಾಧ್ಯವಾಗಿರುವುದು, ಹಾಗೆಯೇ ಮಾರ್ಚ್ 26ರಂದಿನ ಕಿಸಾನ್ ರ್‍ಯಾಲಿ, ನವೆಂಬರ್ 23ರಂದು ನವದೆಹಲಿಯಲ್ಲಿ ನಡೆದ ಕಾರ್ಮಿಕರ ಪಾರ್ಲಿಮೆಂಟ್ ಚಲೋ ಕಾರ್ಯಕ್ರಮಕ್ಕೆ ಹಿಂದಿ ಮಾತನಾಡುವ ಪ್ರದೇಶಗಳಿಂದ ದೊಡ್ಡ ಸಂಖ್ಯೆಯಲ್ಲಿ ರೈತ-ಕಾರ್ಮಿಕರು ಭಾಗವಹಿಸಿರುವುದು...ಇವೆಲ್ಲಾ ಹಿಂದೀ ಮಾತನಾಡುವ ಪ್ರದೇಶದಲ್ಲಿ ಸಿ.ಪಿ.ಐ.(ಎಂ) ಬೆಳೆಯುತ್ತಿದೆ ಎಂಬುದಕ್ಕೆ ಸಾಕ್ಷಿ. ಒಂದು ಬಂಡವಾಳಶಾಹಿ ಪಕ್ಷವು ಹುಟ್ಟಿಕೊಂಡು, ಪ್ರಚಾರ ಗಿಟ್ಟಿಸಿಕೊಂಡಂತೆ ಕ್ರಾಂತಿಕಾರಿ ಪಕ್ಷವು ಬೆಳೆಯುವುದು ಸಾಧ್ಯವಿಲ್ಲ. ದುಡಿಯುವ ಜನತೆಯ ಹೋರಾಟ ಮತ್ತು ಸಂಘಟನೆಗಳು ಬೆಳೆದಂತೆಲ್ಲಾ ಕ್ರಾಂತಿಕಾರಿ ಪಕ್ಷವು ಬೆಳೆಯಲು ಅನುಕೂಲವಾಗುತ್ತದೆ. ಇಂದು ಹಿಂದಿ ಮಾತನಾಡುವ ಪ್ರದೇಶಗಳೂ ಸೇರಿದಂತೆ ರಾಷ್ಟ್ರದಾದ್ಯಂತ ಬೆಳೆಯುತ್ತಿರುವ ದುಡಿಯುವ ವರ್ಗದ ಮತ್ತು ಜನತೆಯ ಹೋರಾಟಗಳು ಮತ್ತು ಈ ಹೋರಾಟಗಳಲ್ಲಿ ಸಿ.ಪಿ.ಐ.(ಎಂ)ನ ಸಕ್ರಿಯ ಪಾತ್ರ ಪಕ್ಷವು ಮುಂದಿನ ದಿನಗಳಲ್ಲಿ ಇನ್ನೂ ತೀವ್ರಗತಿಯಿಂದ ವಿಶಾಲವಾಗಿ ಬೆಳೆಯುವುದರ ಮುನ್ಸೂಚನೆಯಾಗಿದೆ.

●

ಜಿಲ್ಲಾ ಸಮಿತಿ ರಚನೆ

20-1-82 ರಂದು ರಾಯಚೂರು ಜಿಲ್ಲೆಯ ಐದು ತಾಲೂಕುಗಳ ರೈತಪ್ರತಿನಿಧಿಗಳು ರಾಯಚೂರಿನಲ್ಲಿ ಸಭೆ ಸೇರಿ ಜಿಲ್ಲಾ ಮಟ್ಟದಲ್ಲಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಪ್ರಾಂತ ರೈತಸಂಘದ ತಾತ್ಕಾಲಿಕ ಜಿಲ್ಲಾ ಘಟಕ ರಚಿಸಿಕೊಂಡಿರುವರು.

ಜಿಲ್ಲೆಯ ರೈತ ಹಾಗೂ ಕೃಷಿಕಾರ್ಮಿಕರು ಎದುರಿಸುತ್ತಿರುವ ಗಂಭೀರ ಪರಿಸ್ಥಿತಿಯ ಕುರಿತು ದೀರ್ಘ ಚರ್ಚೆ ನಡೆಸಿ, ಸಂಘಟನೆಯನ್ನು ಬಲಿಷ್ಠಪಡಿಸಲು ಕಾರ್ಯಕ್ರಮ ಹಾಕಿಕೊಳ್ಳಲು ತೀರ್ಮಾನಿಸಲಾಯಿತು. ಈಗಾಗಲೇ ಮೂರು ತಾಲೂಕುಗಳಲ್ಲಿ ಚುರುಕಾಗಿ ಕೆಲಸ ನಡೆದಿದ್ದು ಇತರೆಡೆ ಸಂಘಟನೆಯನ್ನು ವಿಸ್ತರಿಸುವ ಕುರಿತು ಚರ್ಚೆ ನಡೆಯಿತು.

ಐದು ತಾಲೂಕುಗಳ ಒಂಭತ್ತು ಜನರಿರುವ ಈ ತಾತ್ಕಾಲಿಕ ಸಮಿತಿಯು ಸಂಚಾಲಕರಾಗಿ ಕಾಂ. ಚಂದ್ರಶೇಖರ ಬಾಳೆಯವರನ್ನು ಆಯ್ಕೆ ಮಾಡಲಾಗಿದೆ.

ಎಸ್.ಎಫ್.ಐ. ಸಭೆ

3-2-82ರಂದು ಬೆಂಗಳೂರಿನ ಸರಕಾರಿ ವಿಜ್ಞಾನ ಕಾಲೇಜಿನ ಎಸ್.ಎಫ್.ಐ. ಘಟಕದ ಸಭೆ ನಡೆಯಿತು. ಸಭೆಯಲ್ಲಿ ಘಟಕದ ಸಂಚಾಲಕರಾಗಿದ್ದ ಕಾಂ. ಚಂದ್ರಶೇಖರ ಅವರ ನಿಧನಕ್ಕೆ ಸಂತಾಪ ಸೂಚಿಸಲಾಯಿತು.

ಈ ಘಟಕಕ್ಕೆ ಕಾಂ. ಡಿ. ಶಿವಶಂಕರ್‌ರವರನ್ನು ಸಂಚಾಲಕರನ್ನಾಗಿ ಮತ್ತು ಕಾಂ. ಶ್ರೀಧರಮೂರ್ತಿಯವರನ್ನು ಸಹಸಂಚಾಲಕರನ್ನಾಗಿ ಆಯ್ಕೆ ಮಾಡಲಾಯಿತು. ರಾಜ್ಯಸಮಿತಿ ಪ್ರಧಾನಕಾರ್ಯದರ್ಶಿ ಕಾಂ. ಆರಾಧ್ಯ ಸಭೆಯಲ್ಲಿ ಹಾಜರಿದ್ದರು. ●

ಗೋಕಾಕ ಸಮಿತಿ ವರದಿ

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿಯ ಬಿಜಾಪುರ ಜಿಲ್ಲಾ ಸಮಿತಿಯ ಸಭೆ ಕಾಂ. ಜಕ್ರಿಯಾಸಾಬ ಕಾಲೇಬಾಗ ಇವರ ಅಧ್ಯಕ್ಷತೆಯಲ್ಲಿ ಸೇರಿ ಜನವರಿ 19 ಮುಷ್ಕರವನ್ನು ಬಂದಾಗಿ ಪರಿವರ್ತಿಸಿ ಇಂದಿರಾ ಕಾಂಗ್ರೆಸ್ಸಿನ ಜನವಿರೋಧಿ ನೀತಿಯ ವಿರುದ್ಧ ಪ್ರತಿಭಟನೆ ವ್ಯಕ್ತಮಾಡಿದ್ದಕ್ಕಾಗಿ ಜಿಲ್ಲೆಯ ಜನತೆಯನ್ನೂ ಕಾರ್ಮಿಕರನ್ನೂ ಅಭಿನಂದಿಸಿ, ಆ ದಿವಸ ನಡೆದ ಪೋಲೀಸ್ ದಬ್ಬಾಳಿಕೆಯನ್ನು ಖಂಡಿಸಿ, ಎಲ್ಲ ವಿರೋಧ ಪಕ್ಷಗಳೂ, ಸಾಮೂಹಿಕ ಸಂಘಟನೆಗಳೂ ಒಗ್ಗಟ್ಟಾಗಿ ಹೋರಾಡುವ ಅಗತ್ಯವನ್ನು ಒತ್ತಿಹೇಳಿತು. ಕರ್ನಾಟಕದ ಅಲ್ಪಭಾಷಿಕರಲ್ಲಿ ಗೊಂದಲವೆಬ್ಬಿಸಿರುವ ಗೋಕಾಕ್ ಸಮಿತಿಯ ವರದಿಯ ಶಿಫಾರಸುಗಳನ್ನು ಎನ್.ಕೆ. ಉಪಾಧ್ಯಾಯರು ವಿವರಿಸಿದ ನಂತರ "ಯಾವ ವಿಷಯದ ಕುರಿತು ಅಭಿಪ್ರಾಯ ವ್ಯಕ್ತಪಡಿಸುವಂತೆ ಸರಕಾರ ಗೋಕಾಕ ಸಮಿತಿಗೆ ತಿಳಿಸಿತ್ತೋ ಅದನ್ನು ಮೀರಿ ವರದಿ ಸಲ್ಲಿಸಲಾಗಿದೆ. ಶಿಕ್ಷಣದಲ್ಲಿ ಕನ್ನಡವೇ ಪ್ರಥಮ ಭಾಷೆಯಾಗಬೇಕೆಂದು ಶಿಫಾರಸು ಮಾಡಿರುವುದು ಸರಿ ಎಂದೂ ಹೇಳಿ ಅವಸರದಲ್ಲಿ ಅದನ್ನು ಒಪ್ಪಿಕೊಂಡು ಜಾರಿಯಲ್ಲಿ ತರಬೇಕೆಂದು ನಿರ್ಣಯಿಸಿ ಸರಕಾರ ತಪ್ಪು ಮಾಡಿದೆ. ಸರಕಾರದ ಅವಸರದ ನಿರ್ಣಯ ಅಲ್ಪಭಾಷಿಕರಲ್ಲಿ (ಉರ್ದು, ಮರಾಠಿ, ತಮಿಳು) ತಪ್ಪು ತಿಳುವಳಿಕೆ ಉಂಟುಮಾಡುತ್ತಿದೆಂದೂ, ಜಾತೀಯ ಮತ್ತು ಪ್ರತಿಗಾಮಿ ಶಕ್ತಿಗಳು ಇದರ ದುರುಪಯೋಗಪಡಿಸಿಕೊಳ್ಳುತ್ತಿವೆಯೆಂದೂ, ಈ ವರದಿಯ ಕುರಿತು ಶಿಕ್ಷಣತಜ್ಞರ ಅಭಿಪ್ರಾಯವನ್ನು ತಿಳಿದುಕೊಳ್ಳುವುದು ಅಗತ್ಯವೆಂದೂ" ಅಭಿಪ್ರಾಯ ವ್ಯಕ್ತಮಾಡಿತು.

ಸಾಲ ವಸೂಲಿಮಾಡುವಲ್ಲಿ ರೈತರ ಮೇಲಾಗುತ್ತಿರುವ ಅನ್ಯಾಯವನ್ನು ಭೀಮಸಿಕಲಾದಗಿಯವರು ವಿವರಿಸಿದ ನಂತರ ಬ್ಯಾಂಕ್ ಮತ್ತು ಸೊಸೈಟಿಗಳ ಸಾಲವನ್ನು ವಸೂಲಿಮಾಡಬಾರದೆಂದು ಹೈಕೋರ್ಟಿನ ತಡೆಯಾಜ್ಞೆ ಇದ್ದರೂ ಕೂಡಾ, ಬ್ಯಾಂಕ್, ಸೊಸೈಟಿ ಮತ್ತು ಕಂದಾಯ ಅಧಿಕಾರಿಗಳು ಒತ್ತಾಯದಿಂದ, ಜಪ್ತಿಮೂಲಕ ಸಾಲ ವಸೂಲಿಮಾಡುತ್ತಿರುವುದನ್ನು ಖಂಡಿಸಿ, ಈ ಕ್ರಮವನ್ನು ನಿಲ್ಲಿಸದಿದ್ದರೆ ತೀವ್ರ ಹೋರಾಟ ಮಾಡಬೇಕೆಂಬ ಎಚ್ಚರಿಕೆ ನೀಡಿತು.

●

ಬೀದರ್ ಬಂದ್

ಜನವರಿ 19ರಂದು ರಾಷ್ಟ್ರದಾದ್ಯಂತ ನಡೆದ ಅಖಿಲಭಾರತ ಸಾರ್ವತ್ರಿಕ ಮುಷ್ಕರದ ಬೆಂಬಲಾರ್ಥವಾಗಿ ಬೀದರ್‌ನಲ್ಲಿ ಬಂದ್ ಆಚರಿಸಲಾಯಿತು. ಈ ಬಂದ್‌ಗೆ ವಿರೋಧ ಪಕ್ಷಗಳು ಕರೆಕೊಟ್ಟಿದ್ದವು. ಪೋಲೀಸರು ಮುನ್ಸೂಚನಾ ಕ್ರಮವಾಗಿ ಕಾಂ. ಸಂಗ್ರಾಮ್, ಸುಂದರರಾಜ್ ಮೊದಲಾದವರನ್ನು ಬಂಧಿಸಿದ್ದರು.

ಬೀದರ್‌ನ ವಿದ್ಯಾರ್ಥಿ ಯುವಜನರು ಮುಷ್ಕರವನ್ನು ಬೆಂಬಲಿಸಿ ಮೆರವಣಿಗೆ ಹೊರಡಿಸಿದ್ದರು. ಪೋಲೀಸರು ಅನೇಕ ವಿದ್ಯಾರ್ಥಿ ಯುವಜನರನ್ನು ಬಂಧಿಸಿದ್ದರು. ಈ ಮೆರವಣಿಗೆಯ ನೇತೃತ್ವವನ್ನು ಎಸ್.ಎಫ್.ಐ.ನ ಕಾಂ. ದತ್ತುಹೊನ್ನಾ ಮತ್ತು ಡಿ.ವೈ.ಎಫ್.ಐ.ನ ಕಾಂ. ಸಂಗಶೆಟ್ಟಿ ಪಾಟೀಲ ಮೊದಲಾದವರು ವಹಿಸಿದ್ದರು.

○

ತಾಲ್ಲೂಕು ರೈತಸಂಘದ ಸಮ್ಮೇಳನಕ್ಕೆ ಸಿದ್ಧತೆ

24-1-82 ರಂದು ದ. ಕ. ಜಿಲ್ಲೆಯ ಪುತ್ತೂರು ತಾಲ್ಲೂಕಿನ ತೆಲ್ಯಾಡಿ ಪ್ರದೇಶದ ರೈತಸಂಘದ ಸಭೆಯು ಕಾಂ. ಬಿ. ರಾಮಕೃಷ್ಣ ಅವರ ಅಧ್ಯಕ್ಷತೆಯಲ್ಲಿ ಸೇರಿ 17-2-82 ರಂದು ಪುತ್ತೂರು ತಾಲ್ಲೂಕು ರೈತ ಸಮ್ಮೇಳನ ನಡೆಸಲು ತೀರ್ಮಾನಿಸಲಾಯಿತು. ಕಾಂ. ರಾಮಕೃಷ್ಣ ಮಾತನಾಡುತ್ತಾ ತಾಲ್ಲೂಕಿನಾದ್ಯಂತ ರೈತಸಂಘಟನೆಯ ಚಟುವಟಿಕೆಯನ್ನು ತೀವ್ರಗೊಳಿಸಲು ಕರೆ ನೀಡಿದರು.

17-2-82ರಂದು ನಡೆಯಲಿರುವ ಸಮ್ಮೇಳನಕ್ಕೆ ಜಿಲ್ಲಾ ಮತ್ತು ರಾಜ್ಯ ರೈತಮುಖಂಡರನ್ನು ಆಹ್ವಾನಿಸಲು ತೀರ್ಮಾನಿಸಲಾಯಿತು.

ಈ ಕುರಿತು ಸ್ವಾಗತ ಸಮಿತಿಯೊಂದನ್ನು ರಚಿಸಲಾಗಿದ್ದು ಅಧ್ಯಕ್ಷರಾಗಿ ಜೋಸೆಫ್, ಕಾರ್ಯದರ್ಶಿಯಾಗಿ ವಿಲ್‌ಫ್ರೆಡ್ ಮತ್ತು ಪಿ. ಸಿ. ಜೋಯ್, ಕೋಶಾಧಿಕಾರಿಯಾಗಿ ಕಾಂ. ಮುಹಮ್ಮದ್ ಆಯ್ಕೆಯಾಗಿದ್ದಾರೆ.

●

ನೂತನ ಸಮಿತಿ ರಚನೆ

4-2-82ರಂದು ಎಸ್.ಎಫ್.ಐ.ನ ರಾಯಚೂರು ನಗರ ಸಮಿತಿಯ ಸಭೆ ನಡೆದು ಪ್ರಸಕ್ತ ವರ್ಷಕ್ಕೆ ನಗರ ಸಮಿತಿಗೆ ಕೆಳಕಂಡವರನ್ನು ಆಯ್ಕೆಮಾಡಲಾಗಿದೆ.

ಅಧ್ಯಕ್ಷರಾಗಿ ಟ್ಯಾಗೋರ್ ಜ್ಯೂನಿಯರ್ ಕಾಲೇಜಿನ ಗುರುಸ್ವಾಮಿ, ಉಪಾಧ್ಯಕ್ಷರಾಗಿ ಹಮ್‌ದರ್ದ್ ಹೈಸ್ಕೂಲಿನ ಕುಮಾರಿ ಸಂಪ್ರಾ, ಪ್ರಧಾನಕಾರ್ಯದರ್ಶಿಯಾಗಿ ಲಕ್ಷ್ಮಿ ವೆಂಕಟೇಶ್ ದೇಸಾಯಿ ಕಾಲೇಜಿನ ಆರ್. ಬಸವರಾಜ್, ಸಹಕಾರ್ಯದರ್ಶಿಗಳಾಗಿ ಸರಕಾರಿ ಜ್ಯೂನಿಯರ್ ಕಾಲೇಜಿನ ಸಯ್ಯದ್ ನೂರುದ್ದೀನ್, ಸಂಭದ್ರಪ್ಪ, ಕಾಲೇಜಿನ ಕುಮಾರಿ ವಿಜಯಲಕ್ಷ್ಮಿ, ಖಜಾಂಚಿಯಾಗಿ ಮಲ್ಲಿಕಾರ್ಜುನ ಸಜ್ಜನ ಮತ್ತು ಹದಿನೇಳು ಜನರ ಕಾರ್ಯಕಾರಿ ಸಮಿತಿಯನ್ನು ಆಯ್ಕೆಮಾಡಲಾಗಿದೆ.

ಎಸ್.ಎಫ್.ಐ. ರಾಜ್ಯಸಮಿತಿ ಕಾರ್ಯದರ್ಶಿ ಕಾಂ. ಕೆ. ಬಸವರಾಜ್ ಸಭೆಯಲ್ಲಿ ಭಾಗವಹಿಸಿದ್ದರು.

●

ಧರಣಿ ಮುಷ್ಕರ

8-2-82ರಂದು ಬೆಳಿಗ್ಗೆ 11 ಘಂಟೆಯಿಂದ ಸಾಯಂಕಾಲದವರೆಗೆ ಭಾರತ ವಿದ್ಯಾರ್ಥಿ ಫೆಡರೇಷನ್ನಿನ ಬೆಂಗಳೂರು ನಗರ ಸಮಿತಿಯ ಕಾರ್ಯಕರ್ತರು ಉಪಕುಲಪತಿಗಳ ಕಚೇರಿ ಎದುರು ಧರಣಿ ಮುಷ್ಕರ ನಡೆಸಿದರು.

ಸಪ್ಲಿಮೆಂಟರಿ ಪರೀಕ್ಷೆಗಳ ಫಲಿತಾಂಶವನ್ನು ಕೂಡಲೇ ಪ್ರಕಟಿಸಬೇಕು ಮತ್ತು ಸ್ನಾತಕೋತ್ತರ ಪದವಿ ಪರೀಕ್ಷೆಗಳಲ್ಲಿ ತೃತೀಯ ದರ್ಜೆಯನ್ನು ರದ್ದುಪಡಿಸಬೇಕು ಎಂಬೆರಡು ಬೇಡಿಕೆಗಳನ್ನು ಮುಂದಿಟ್ಟು ಈ ಧರಣಿ ಮುಷ್ಕರ ನಡೆಯಿತು.

ಈ ಮುಷ್ಕರದಲ್ಲಿ 25 ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು. ನಂತರ ಉಪಕುಲಪತಿಗಳಿಗೆ ಮನವಿ ಸಲ್ಲಿಸಲಾಯಿತು.

●

ಆಲ್ ಇಂದಿರಾ ರೇಡಿಯೋಗೆ ಧಿಕ್ಕಾರ!

ಮೈಸೂರಿನಲ್ಲಿ ಮೊಳಗಿದ ಪ್ರತಿಭಟನಾ ಧ್ವನಿ

ಜನವರಿ 19 ರಂದು ರಾಷ್ಟ್ರದಾದ್ಯಂತ ಅತ್ಯಂತ ಯಶಸ್ವಿಯಾಗಿ ನಡೆದ ಕಾರ್ಮಿಕರ ಚಾರಿತ್ರಿಕ ಮುಷ್ಕರದ ಬಗ್ಗೆ ಸುಳ್ಳು ಸುದ್ದಿಗಳನ್ನು ಪ್ರಸಾರ ಮಾಡಿದ ಆಕಾಶವಾಣಿಯ ಪಕ್ಷಪಾತ ಧೋರಣೆಯನ್ನು ಪ್ರತಿಭಟಿಸಿ 26-1-82 ರಂದು ಮೈಸೂರಿನಲ್ಲಿ ಆಕಾಶವಾಣಿ ನಿಲಯದೆದುರು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕಾರ್ಯಕರ್ತರು ಪ್ರತಿಭಟನಾ ಪ್ರದರ್ಶನ ನಡೆಸಿದರು.

30ಜನ ಮಹಿಳೆಯರೂ ಸೇರಿದಂತೆ 200 ಜನರಿದ್ದ ಪ್ರತಿಭಟನಾ ಮೆರವಣಿಗೆಯು ನಗರದ ಮುಖ್ಯಬೀದಿಗಳಲ್ಲಿ ಘೋಷಣೆ ಕೂಗುತ್ತಾ ಸಾಗಿ ಆಕಾಶವಾಣಿ ನಿಲಯದ ಎದುರು ಒಂದು ಘಂಟೆ ಕಾಲ ಧರಣಿ ಕುಳಿತುಕೊಳ್ಳಲಾಯಿತು. ನಂತರ ಸ್ಥಳೀಯ ಆಕಾಶವಾಣಿ ನಿಲಯದ ನಿರ್ದೇಶಕರಿಗೆ ಸಲ್ಲಿಸಲಾದ ಮನವಿಪತ್ರದಲ್ಲಿ ನಿಷ್ಪಕ್ಷಪಾತ ಸುದ್ದಿಯನ್ನು ಪ್ರಕಟಿಸುವ ನಿಟ್ಟಿನಲ್ಲಿ ಆಕಾಶವಾಣಿಗೆ ಸ್ವಾಯತ್ತತೆ ನೀಡಬೇಕೆಂದು ಒತ್ತಾಯಿಸಲಾಯಿತು.

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಪ್ರದೇಶ ಸಮಿತಿಯ ಕಾರ್ಯದರ್ಶಿ ಕಾಂ. ಎಂ. ಎನ್. ಉಗ್ರಪ್ಪ, ಸಿ.ಕೆ. ಮೋಹನ್, ಶೇಖರ ಮತ್ತು ಕಾಂ. ರಾಜೇಂದ್ರ ಅವರುಗಳು ರ್‍ಯಾಲಿಯ, ಪ್ರತಿಭಟನಾ ಪ್ರದರ್ಶನದ ನೇತೃತ್ವ ವಹಿಸಿದ್ದರು. ವಿಕ್ರಾಂತ್ ಟೈರ್ಸ್, ಕಾರ್ಪೊರೇಷನ್, ಪಾವನ್‌ಕೊಕನಟ್, ಎಲ್ಲೈಸಿ ಮತ್ತು ಬ್ಯಾಂಕ್‌ನ ಕಾರ್ಮಿಕರು, ನೌಕರರು, ಎಸ್. ಎಫ್. ಐ. ಮತ್ತು ಡಿ. ವೈ. ಎಫ್. ಐ. ಸದಸ್ಯರು ಪ್ರತಿಭಟನಾ ರ್‍ಯಾಲಿಯಲ್ಲಿ ಭಾಗವಹಿಸಿದ್ದರು.

ಮಂಗಳೂರು

ಜನವರಿ 19 ರಂದು ರಾಷ್ಟ್ರದಾದ್ಯಂತ ನಡೆದ ಯಶಸ್ವೀ ಸಾರ್ವತ್ರಿಕ ಮುಷ್ಕರದ ವೇಳೆಯಲ್ಲಿ ಆಕಾಶವಾಣಿಯು ಸುದ್ದಿ ಪ್ರಸಾರ ಮಾಧ್ಯಮವನ್ನು ಮುಷ್ಕರ ವಿರೋಧಿ ಪ್ರಚಾರಗಳಿಗೂ ಸುಳ್ಳು ಸುದ್ದಿಗಳ ಪ್ರಸಾರಕ್ಕೂ ವ್ಯಾಪಕವಾಗಿ ಉಪಯೋಗಿಸಿದುದನ್ನು ಪ್ರತಿಭಟಿಸಿ ಮಂಗಳೂರು ಆಕಾಶವಾಣಿ ನಿಲಯದೆದುರು ಜ. 26 ರಂದು ಸಿ. ಪಿ. ಐ. (ಎಂ) ಕಾರ್ಯಕರ್ತರು ಪ್ರತಿಭಟನಾ ಪ್ರದರ್ಶನ ನಡೆಸಿದರು.

ಈ ಪ್ರತಿಭಟನಾ ಪ್ರದರ್ಶನಕ್ಕೆ ಸಿ.ಪಿ.ಐ.(ಎಂ) ರಾಜ್ಯ ಸಮಿತಿ ಕರೆ ನೀಡಿತ್ತು.

ಪ್ರದರ್ಶನಕಾರರು "ಆಕಾಶವಾಣಿ ನಮ್ಮ ದೇಶದ ಸೊತ್ತು. ಆಳುವ ಪಕ್ಷದ ಖಾಸಗಿ ಸೊತ್ತಲ್ಲ", "ಸುಳ್ಳು ಪ್ರಚಾರಗಳಿಗೆ ಧಿಕ್ಕಾರ" ಎಂಬಿತ್ಯಾದಿ ಘೋಷಣೆಗಳನ್ನು ಕೂಗುತ್ತಿದ್ದರು. ಪ್ರದರ್ಶನಕಾರರನ್ನುದ್ದೇಶಿಸಿ ಕಾಂ. ಕೆ. ಮುಹಸಬ್ಬ ಮಾತನಾಡಿದರು.

ನಂತರ ಪ್ರದರ್ಶನಕಾರರ ಪರವಾಗಿ ಕಾಂ. ಕೆ. ಮುಹಸಬ್ಬ, ಯು. ಜನಾರ್ಧನ ನಾಯಕ್ ನಿಲಯದ ಉಪನಿರ್ದೇಶಕರನ್ನು ಭೇಟಿಯಾಗಿ ಮನವಿ ಸಲ್ಲಿಸಿದರು.

ಗುಲ್ಬರ್ಗಾ

ಅಖಿಲ ಭಾರತ ಸಾರ್ವತ್ರಿಕ ಮುಷ್ಕರದ ಕುರಿತು ಆಳುವ ಪಕ್ಷದ ಮುಖವಾಣಿಯಾಗಿ ಸುಳ್ಳುಸುದ್ದಿಗಳನ್ನು ಪ್ರಸಾರ ಮಾಡಿದ ಆಕಾಶವಾಣಿಯ ಪಕ್ಷಪಾತ ಧೋರಣೆಯನ್ನು ಪ್ರತಿಭಟಿಸಿ 26-1-82ರಂದು ಸಿ.ಪಿ.ಐ.(ಎಂ), ಸಿ.ಪಿ.ಐ., ಕಾಂಗ್ರೆಸ್ (ಎಸ್), ಜನತಾ ಪಾರ್ಟಿ ಮತ್ತು ಲೋಕದಳ ಮುಂತಾದ ವಿರೋಧ ಪಕ್ಷಗಳ ನೂರಾರು ಕಾರ್ಯಕರ್ತರು ಪ್ರತಿಭಟನಾ ಪ್ರದರ್ಶನ ನಡೆಸಿದರು.

●

ವಿದ್ಯಾರ್ಥಿ-ಯುವಜನರ ಹೋರಾಟ ಸಮಿತಿ ರಚನೆ

15-1-82ರಂದು ಮೈಸೂರಿನ ಜನತಾ ಪಕ್ಷದ ಕಚೇರಿಯಲ್ಲಿ ಎಸ್. ಎಫ್. ಐ., ಡಿ. ವೈ. ಎಫ್. ಐ., ಯುವಜನತಾ, ಯುವ ಕಾಂಗ್ರೆಸ್ (ಎಸ್), ಎ.ಬಿ.ವಿ.ಪಿ. ಸಂಘಟನೆಗಳ ಕಾರ್ಯಕರ್ತರ ಜಂಟಿ ಸಭೆಯಲ್ಲಿ ಮೊದಲ ಬಾರಿಗೆ ವಿದ್ಯಾರ್ಥಿ-ಯುವಜನರ ಹೋರಾಟ ಸಮಿತಿಯನ್ನು ರಚಿಸಲಾಗಿದೆ. ಎಸ್.ಎಫ್.ಐ. ರಾಜ್ಯ ಸಮಿತಿ ಅಧ್ಯಕ್ಷ ಕಾಂ. ಆರ್. ಜಯಕುಮಾರ್ ಈ ಹೋರಾಟ ಸಮಿತಿಯ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಯುವ ಜನತಾದ ಆರ್. ಚಂದ್ರಶೇಖರ್ ಇನ್ನೊರ್ವ ಸಂಚಾಲಕರಾಗಿರುತ್ತಾರೆ. ಎಸ್. ಎಫ್. ಐ. ನಗರ ಸಮಿತಿಯ ಉಪಾಧ್ಯಕ್ಷ ಅಶೋಕ್ ಕುಮಾರ್, ಡಿ.ವೈ.ಎಫ್.ಐ. ಕಾರ್ಯದರ್ಶಿ ಜಯರಾಂ, ಅಪ್ಪುರವರು ಸದಸ್ಯರಾಗಿದ್ದಾರೆ.

ಜ. 19ರ ಅಖಿಲ ಭಾರತ ಸಾರ್ವತ್ರಿಕ ಮುಷ್ಕರ ಹಾಗೂ ಮೈಸೂರು ಬಂದ್ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಹೋರಾಟ ಸಮಿತಿಯು 5000 ಕರಪತ್ರಗಳನ್ನು ಮುದ್ರಿಸಿ ನಗರದ ಎಲ್ಲ ಶಾಲೆ-ಕಾಲೇಜುಗಳಲ್ಲಿ ವಿತರಣೆ ಮಾಡಿತ್ತು. 19ರ ಮೈಸೂರು ಬಂದ್ ಯಶಸ್ವಿಯಾಗುವಲ್ಲಿ ಸಹಕರಿಸಿದ ಎಲ್ಲ ವಿದ್ಯಾರ್ಥಿ-ಯುವಜನರನ್ನು ಹೋರಾಟ ಸಮಿತಿ ಅಭಿನಂದಿಸಿದೆ.

●

ನಾಟಕಗಳ ಪ್ರದರ್ಶನ

ಬಿಜಾಪುರದ ಎ. ಬಿ. ದರಬಾರ ಕಿರಿಯರ ಮಹಾವಿದ್ಯಾಲಯದಲ್ಲಿ 16-1-82ರಂದು ಬೆಂಗಳೂರಿನ ಅಭಿನಯ ತರಂಗದವರು ಬಡವಿದ್ಯಾರ್ಥಿಗಳ ಸಹಾಯಾರ್ಥ ಮೂರು ವಿಭಿನ್ನ ಶೈಲಿಯ ನಾಟಕಗಳನ್ನು ಅಭಿನಯಿಸಿದರು. ಶ್ರೀ ಅಶೋಕ ಬಾದರದಿನ್ನಿಯವರ ನಿರ್ದೇಶನದಲ್ಲಿ ಮೂಡಿ ಬಂದ ಈ ನಾಟಕಗಳು ಇಂದಿನ ಕೊಳಕು, ಭ್ರಷ್ಟ ದಬ್ಬಾಳಿಕೆಯ ರಾಜಕಾರಣ, ವ್ಯವಸ್ಥೆಯಡಿಯಲ್ಲಿ ಸಿಕ್ಕು ಸಿಪ್ಪೆಯಾದ ಶ್ರೀಸಾಮಾನ್ಯನ ಪಾಡು, ಅಸಹಾಯಕತೆಯ ಕುರಿತು ಮಾರ್ಮಿಕವಾಗಿ ಪ್ರತಿಬಿಂಬಿಸಿದವು.

ಬೆಸಗರಹಳ್ಳಿ ರಾಮಣ್ಣನವರ 'ಕ್ರೋಧ-ಕಥೆ', ದಿವಂಗತ ಬೇಂದ್ರೆಯವರ 'ಜಾತ್ರೆ' ಆಧರಿಸಿದ ಎರಡು ಮತ್ತು 'ಕೇಳ್ರೀಪೊ-ಕೇಳ್ರಿ' ಎಂಬ ಬೀದಿ ನಾಟಕ ಇವು ಪ್ರದರ್ಶಿತ ನಾಟಕಗಳು.

ಈ ನಾಟಕ ಪ್ರದರ್ಶನಕ್ಕೆ ಪ್ರೊ. ಜಿ. ಟಿ. ಸಾಸನೂರು ಅವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. "ನಾಟಕಕ್ಷೇತ್ರ ಇಂದು ಪಡೆದುಕೊಳ್ಳುತ್ತಿರುವ ಹೊಸ ಆಯಾಮದ ಬಗ್ಗೆ ಪ್ರೊ. ಸಾಸನೂರ ಸಂತಸ ವ್ಯಕ್ತಪಡಿಸಿದರು. ಎ. ಬಿ. ದರಬಾರ ಪ್ರೌಢ ಮಾಧ್ಯಮಿಕ ಶಾಲೆಯ ಪ್ರಾಚಾರ್ಯ ಶ್ರೀ ಎ. ಎನ್. ತೊರಗಲ್ ವಂದನಾರ್ಪಣೆ ಮಾಡಿದರು.

○

ಮೈಸೂರಿನಲ್ಲಿ ಎಸ್.ಎಫ್.ಐ. 11ನೇ ವಾರ್ಷಿಕೋತ್ಸವ ಆಚರಣೆ

ಕಾಂ. ಸೋಮಸುಂದರಮ್, ಕಾಂ. ಸೆಂಬುಲಿಂಗಮ್ ಫಲಕ ಸ್ಥಾಪನೆ

ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್.ಎಫ್.ಐ.) 11ನೇ ವಾರ್ಷಿಕೋತ್ಸವವನ್ನು ಮೈಸೂರು ಎಸ್. ಎಫ್. ಐ. ಘಟಕವು ಸ್ಥಳೀಯ ಮಹಾರಾಜ ಕಾಲೇಜಿನಲ್ಲಿ 18-1-82 ರಂದು ಅತ್ಯಂತ ಯಶಸ್ವಿಯಾಗಿ ಆಚರಿಸಿತು. ತಮಿಳುನಾಡಿನ ಮದುರೈ ಇಂಜಿನಿಯರಿಂಗ್ ಕಾಲೇಜಿನಲ್ಲಿ ಜಾತಿವಾದಿ ಗೂಂಡಾಗಳಿಂದ ಕೊಲೆಗೈಯಲ್ಪಟ್ಟ ಎಸ್.ಎಫ್.ಐ. ಸಂಗಾತಿಗಳಾದ ಸೋಮಸುಂದರಮ್ ಮತ್ತು ಸೆಂಬುಲಿಂಗಂ ಸ್ಮಾರಕ ಪರ್‍ಯಾಯ ಪಾರಿತೋಷಕದ ಸ್ಥಾಪನೆಯು ವಾರ್ಷಿಕೋತ್ಸವದ ವಿಶೇಷತೆ. ತಮಿಳುನಾಡು ಎಸ್.ಎಫ್.ಐ. ಉಪಾಧ್ಯಕ್ಷರಾದ ಕಾಂ. ಸಿ. ವಿಜಯಕುಮಾರ್ ರವರು ಅತಿಥಿಗಳಾಗಿ ವಾರ್ಷಿಕೋತ್ಸವ ಸಮಾರಂಭದಲ್ಲಿ ಭಾಗವಹಿಸಿ ಪರ್‍ಯಾಯ ಫಲಕವನ್ನು ವಿತರಣೆ ಮಾಡಿದರು. ನಗರದ ವಿದ್ಯಾವರ್ಧಕ ಕಾಮರ್ಸ್ ಕಾಲೇಜು ಈ ವರ್ಷ ಈ ಫಲಕವನ್ನು ಪಡೆದುಕೊಂಡಿದೆ.

ಮೈಸೂರು ವಿಶ್ವವಿದ್ಯಾಲಯದ ಸೆನೆಟ್ ಸದಸ್ಯರಾದ ಹೆಸರಾಂತ ವಕೀಲರಾದ ವಿ. ಎಚ್. ಗೌಡರು ವಾರ್ಷಿಕೋತ್ಸವ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ರಾಜ್ಯ ಎಸ್. ಎಫ್. ಐ. ಪ್ರಧಾನ ಕಾರ್ಯದರ್ಶಿ ಕಾಂ. ಎಸ್. ಆರ್. ಆರಾಧ್ಯ ಎಸ್. ಎಫ್. ಐ. ಧ್ವಜಾರೋಹಣ ಮಾಡಿದರು. ರಾಜ್ಯ ಎಸ್. ಎಫ್. ಐ. ಅಧ್ಯಕ್ಷರಾದ ಕಾಂ. ಆರ್. ಜಯಕುಮಾರ್ ಅಧ್ಯಕ್ಷತೆ ವಹಿಸಿದ್ದರು. ಮೊದಲಿಗೆ ಮೈಸೂರು ನಗರ ಎಸ್.ಎಫ್.ಐ. ಘಟಕದ ಅಧ್ಯಕ್ಷರಾದ ಕಾಂ. ಸಲೀಲ್ ಗೋಪಿನಾಥ್ ಸ್ವಾಗತಿಸಿದರು. ಉಪಾಧ್ಯಕ್ಷರಾದ ಕಾಂ. ಅಶೋಕ್ ಕುಮಾರ್ ಧನ್ಯವಾದ ಸಲ್ಲಿಸಿದರು.

11ನೇ ವಾರ್ಷಿಕೋತ್ಸವದ ಸಂದರ್ಭದಲ್ಲಿ ಮೈಸೂರು ಎಸ್.ಎಫ್.ಐ. ಘಟಕವು ಕನ್ನಡ ಚರ್ಚಾಗೋಷ್ಠಿ, ಇಂಗ್ಲಿಷ್ ಚರ್ಚಾಗೋಷ್ಠಿ ಮತ್ತು ಸಾಮಾನ್ಯ ಜ್ಞಾನ ಸ್ಪರ್ಧೆಗಳನ್ನು ನಡೆಸಿತ್ತು. ಇದರಲ್ಲಿ ನಗರದ ಕಾಲೇಜುಗಳಿಂದ ನೂರಾರು ವಿದ್ಯಾರ್ಥಿಗಳು ಭಾಗವಹಿಸಿದ್ದರು. ಪ್ರಶಸ್ತಿ ವಿಜೇತರಿಗೆ ವಾರ್ಷಿಕೋತ್ಸವ ಸಂದರ್ಭದಲ್ಲಿ ಬಹುಮಾನ ಹಾಗೂ ಸರ್ಟಿಫಿಕೇಟುಗಳನ್ನು ವಿತರಣೆ ಮಾಡಲಾಯಿತು. ●

ಪೋಲೀಸ್ ದಬ್ಬಾಳಿಕೆಯ ವಿರುದ್ಧ ಧರಣಿ ಸತ್ಯಾಗ್ರಹ

ಕಳೆದೆರಡು ವರ್ಷಗಳಿಂದ ಬಿಜಾಪುರ ಜಿಲ್ಲೆಯಲ್ಲಿ ಕಾಯಿದೆ-ಕಾನೂನುಗಳು ಕುಸಿದು ಬಿದ್ದಿರುವುದನ್ನೂ, ಜನವರಿ 19ರಂದು ಪೋಲೀಸರು ನಡೆಸಿದ ದಬ್ಬಾಳಿಕೆಯನ್ನು ಖಂಡಿಸಿ, ಪೋಲೀಸ್ ಅಧಿಕಾರಿಗಳ ಬದ್ಲಿಯಾಗಬೇಕೆಂದು ಸರಕಾರದ ಮೇಲೆ ಒತ್ತಾಯ ತರುವ ಸಲುವಾಗಿ ಎಲ್ಲ ವಿರೋಧಿ ಪಕ್ಷಗಳ ಮುಖಂಡರೂ, ಕಾರ್ಯಕರ್ತರೂ, ರೈತಸಂಘ, ವಿದ್ಯಾರ್ಥಿ ಫೆಡರೇಷನ್‌ಗಳವರೂ ಫೆಬ್ರವರಿ 5ರಂದು ಗಾಂಧಿ ಚೌಕದಲ್ಲಿ ಒಂದು ದಿವಸದ ಧರಣಿ ಸತ್ಯಾಗ್ರಹ ನಡೆಸಿದರು. ನೂರಾರು ಮಂದಿ ಧರಣಿ ಸತ್ಯಾಗ್ರಹದಲ್ಲಿ ಪಾಲ್ಗೊಂಡದ್ದಲ್ಲದೆ, ಸಾವಿರಾರು ಜನ ಈ ಹೋರಾಟಕ್ಕೆ ಬೆಂಬಲ ವ್ಯಕ್ತ ಮಾಡಿದರು. ಸಾಯಂಕಾಲ ನಾಗರಾಜ ವಕೀಲರ ಅಧ್ಯಕ್ಷತೆಯಲ್ಲಿ ಸೇರಿದ ಬೃಹತ್ ಸಾರ್ವಜನಿಕ ಸಭೆಯಲ್ಲಿ, ಭೀಮಸಿಕಲಾದಗಿ, ಮಿಂಚಿ, ಎನ್. ಕೆ. ಉಪಾಧ್ಯಾಯ, ಹಳಿಂಗಳಿ, ಚಿಂಚಲಕರ, ಮಠ ಮೊದಲಾದವರೆಲ್ಲ ಭಾಷಣ ಮಾಡಿ ಪೋಲೀಸ ದಬ್ಬಾಳಿಕೆಯನ್ನೂ, ಸರಕಾರದ ನೀತಿಯನ್ನೂ ಖಂಡಿಸಿದರು. ಒಂದು ತಿಂಗಳೊಳಗಾಗಿ ಪೋಲೀಸ್ ಅಧಿಕಾರಿಗಳ ಬದ್ಲಿಯಾಗದಿದ್ದರೆ ಇನ್ನೂ ತೀವ್ರತರ ಹೋರಾಟ ನಡೆಸಲು ನಿರ್ಧರಿಸಲಾಯಿತು.

○

ಕ್ರಿಸ್ಟ್ ಬಿಸ್ಕಟ್ ಕಂಪನಿ ಕಾರ್ಮಿಕರ ಸಭೆ

24-1-82ರಂದು ಕ್ರಿಸ್ಟ್ ಬಿಸ್ಕಟ್ ಕಂಪನಿಯ ಕಾರ್ಮಿಕರು ಸಭೆಸೇರಿ ಸಿ. ಐ. ಟಿ. ಯು. ನೇತೃತ್ವದಲ್ಲಿ ಕಾರ್ಮಿಕ ಸಂಘವನ್ನು ರಚಿಸಿಕೊಂಡಿದ್ದಾರೆ.

ಅಧ್ಯಕ್ಷರಾಗಿ ಕಾಂ. ಅನಂತರಾವ್, ಉಪಾಧ್ಯಕ್ಷರಾಗಿ ಭೈರಾರೆಡ್ಡಿ, ಆರ್. ಶ್ರೀನಿವಾಸ್. ಪ್ರಧಾನ ಕಾರ್ಯದರ್ಶಿಯಾಗಿ, ಕಾರ್ಯದರ್ಶಿಯಾಗಿ ಭೈರಪ್ಪ, ನರಸಿಂಹಯ್ಯ ಖಜಾಂಚಿಯಾಗಿ ಆಯ್ಕೆಯಾಗಿದ್ದಾರೆ. ಹಾಗೂ 4 ಜನ ಮಹಿಳಾ ಕಾರ್ಮಿಕರೂ ಸೇರಿದಂತೆ 12 ಜನರ ಕಾರ್ಯಕಾರಿ ಸಮಿತಿಯನ್ನು ಚುನಾಯಿಸಲಾಗಿದೆ.

ಈ ಕುರಿತು ನಡೆದ ಸಭೆಯನ್ನುದ್ದೇಶಿಸಿ ಕ್ವಾಲಿಟಿ ಬಿಸ್ಕಟ್ ಕಂಪನಿಯ ಕಾಂ. ಚಂದ್ರಶೇಖರ ಮಾತನಾಡಿ, ಕ್ರಿಸ್ಟ್ ಬಿಸ್ಕಟ್ ಕಂಪನಿಯ ಕಾರ್ಮಿಕರು ಸಂಘಟನೆ ಕಟ್ಟಿ ಹೋರಾಡಲು ಮುಂದೆ ಬಂದದ್ದು ಸ್ವಾಗತಾರ್ಹ ಎಂದರು. ಮತ್ತು ಕ್ವಾಲಿಟಿ ಬಿಸ್ಕಟ್ ಕಾರ್ಮಿಕರ ಬೆಂಬಲವನ್ನೂ ಸೂಚಿಸಿದರು.

○

ಸ್ವಾಭಿಮಾನದ ಸಾಧನ ಆಗಬೇಕು ಸಾಹಿತ್ಯ

(ರಾಯಚೂರಿನಲ್ಲಿ ಫೆಬ್ರವರಿ 6 ಮತ್ತು 7ರಂದು ಕರ್ನಾಟಕ ರಾಜ್ಯ ಮೂರನೇ ಬಂಡಾಯ ಸಾಹಿತ್ಯ ಸಮ್ಮೇಳನ ಯಶಸ್ವಿಯಾಗಿ ನಡೆದಿದೆ. ಫೆಬ್ರವರಿ 6ರಂದು ಆರಂಭವಾದ ಸಮ್ಮೇಳನವನ್ನು ಶ್ರೀ ದೇವನೂರು ಮಹಾದೇವ ಉದ್ಘಾಟಿಸಿದರು.

ಸಮಾರೋಪ ಕಲಾಪದ ವರದಿಯನ್ನು ಸ್ಥಳಾಭಾವದಿಂದ ಈ ವಾರ ಪ್ರಕಟಿಸಿಲ್ಲ. ಮುಂದಿನವಾರ ಕೊಡಲಾಗುವುದು.)

"ರಾಜಕೀಯ ಅಂದ್ರೆ ವೈಯಕ್ತಿಕ ಅಂತಾರೆ. ರಾಜಕೀಯ ಅಂದ್ರೆ ಸರಿಯಾಗಿ ತಿಳಿದಿಲ್ಲ. ರಾಜಕೀಯ ಸಾಮಾಜಿಕ ಪ್ರಜ್ಞೆಯ ಆಳ. ಸಾಮಾಜಿಕ ಪ್ರಜ್ಞೆಯ ಮುಂದುವರಿಕೆಯ ಹಂತವೇ ರಾಜಕೀಯ ಪ್ರಜ್ಞೆ. ಸಮಾಜದ ಗತಿ ಅರ್ಥಮಾಡಿಕೊಳ್ಳೋದು ಅಂದರೆ ರಾಜಕೀಯ ಮಡಿವಂತಿಕೆ ಬಿಡಬೇಕು. ಆದ್ದರಿಂದ ರಾಜಕೀಯ ಪ್ರಜ್ಞೆ ಅಂದ್ರೆ ಸಮಾಜದಿಂದ ದೂರ ಇದೆ ಎಂದು ಭಾವಿಸುವುದು ಅವೈಜ್ಞಾನಿಕ. ಆದರೆ ಯಾವ ರಾಜಕೀಯ ಅನ್ನೋದು ಮುಖ್ಯ. ಇದರಲ್ಲಿ ಎಡ ರಾಜಕೀಯ ಇದೆ; ಬಲ ರಾಜಕೀಯ ಇದೆ. ಎಡ ರಾಜಕೀಯ ಅಂದ್ರೆ ತೀವ್ರಗೊಳಿಸೋದು. ಚಲನಶೀಲವಾದದ್ದು. ಬಲ ರಾಜಕೀಯ ಅಂದ್ರೆ ವಿರೋಧಿಸೋದು ಸ್ಥಗಿತಗೊಳಿಸೋದು".

"ಮೊದಲನೇದಾಗಿ ರಾಜಕೀಯ ಅಂದ್ರೆ ಸಂಕೋಚಬೇಡ. ಇದಕ್ಕೆ ನಮಗೆ ಯಾವುದೇ ಸಂಕೋಚ ಇಲ್ಲ. ಅವಮಾನ ಅಲ್ಲ. ಯಾಕೆಂದರೆ ಸಾಹಿತ್ಯದ ಎಲ್ಲ ಪ್ರಾಕಾರಗಳಲ್ಲೂ ರಾಜಕೀಯ ಇದೆ".

"79ಕ್ಕಿಂತ ಇಂದು ನಮಗೆ ಹೆಚ್ಚು ಬಂಡಾಯದ ಅವಶ್ಯ ಇದೆ. ಯಾಕೆಂದರೆ ಕನ್ನಡ ಸಾಹಿತ್ಯದಲ್ಲಿ 79ರ ನಂತರದಿಂದ 'ಕಲೆಗಾಗಿ ಕಲೆ' 'ಶುದ್ಧ ಸಾಹಿತ್ಯ' ಎನ್ನುವ ಜನವಿರೋಧಿ ನಿಲುವು ಹೆಚ್ಚಾಗ್ತಾ ಇದೆ".

"ಜಾತಿಪದ್ಧತಿಯಲ್ಲೂ ಕೂಡ ಸೃಜನಶೀಲತೆ ಹುಡುಕುವವರ, ಮೂಢ ನಂಬಿಕೆಯಲ್ಲಿ ಹೊಸ ಅರ್ಥ ಹುಡುಕುವವರ, ಮಠಾಧಿಪತಿಗಳ ವಿರುದ್ಧ ನಮ್ಮ ಹೋರಾಟ ಬರುಸಾಗಬೇಕಿದೆ".

"ಕೆಳವರ್ಗದ ಜನ ಹೆಚ್ಚು ಮೂಢ ನಂಬಿಕೆ ನಂಬ್ತಾರೆ. ಮಧ್ಯಮವರ್ಗದವರು ಶಿಷ್ಟಾಚಾರ ಇಟ್ಕೊಂಡಾರೆ. ಮೇಲ್ವರ್ಗದವರು ಏಕದೇವತಾ, ನಿರಾಕಾರ ಅಂತಾರೆ. ಅಂದರೆ ದೇವರಲ್ಲಿರುವ ನಂಬಿಕೆಯಲ್ಲೂ ವರ್ಗ ಸ್ವಭಾವ ಇದೆ."

"ಮೂಢನಂಬಿಕೆ ವಿರೋಧಿಸುವಾಗ ಆಳುವಶಕ್ತಿಗಳನ್ನು ವಿರೋಧಿಸದೆ ಸಂಪೂರ್ಣ ಆಗಲ್ಲ. ಇಲ್ಲಿ ಬಂಡವಾಳಶಾಹಿ ಪದ್ಧತಿ ಇದ್ದರೂ ಬಂಡವಾಳಶಾಹಿ ಸಂಸ್ಕೃತಿ ಇಲ್ಲ. ಹಮೀಂನ್ದಾರಿ ಸಂಸ್ಕೃತಿ ಕ್ರಾಂತಿ ಎಂದರೆ ಬರೀ ಆರ್ಥಿಕ ಬದಲಾವಣೆ ಅಷ್ಟೇ ಅಂತ ತಿಳಕೊಳ್ಳೋದು ಅಲ್ಲ. ಬರೀ ಹೊಸ ನೋಟ ಅಲ್ಲ. ಆದರೆ ಹೊಸ ಮನಸ್ಸು ಕೂಡ. ಜಾತಿ ವ್ಯವಸ್ಥೆ, ಬಾಲ್ಯವಿವಾಹ, ಅಸ್ಪೃಶ್ಯತೆ ಇವುಗಳ ವಿರುದ್ಧ ಹೋರಾಡದೆ ಕ್ರಾಂತಿಗೆ ಅರ್ಥ ಇರಲ್ಲ. ಆದರೆ ವರ್ಗಹೋರಾಟದ ಅವಿಭಾಜ್ಯ ಅಂಗವಾಗಿ, ವರ್ಗಹೋರಾಟಕ್ಕೆ ಪೂರಕವಾಗಿ ಇವೆಲ್ಲ ಮೂಡಿಬರಬೇಕು. ವಿಧಾನ ಸೌಧಕ್ಕೆ ರಜೆಕೊಟ್ಟು ಧರ್ಮಸ್ಥಳಕ್ಕೆ ಧಾವಿಸುವುದು ಇಡೀ ಕನ್ನಡ ಜನತೆಗೆ ಮಾಡಿದ ಅವಮಾನ. ಹೇಗೆ ನಮ್ಮ ಜನನಾಯಕರು ಅವೈಜ್ಞಾನಿಕವಾಗಿ ಯೋಚನೆ ಮಾಡ್ತಾ ಇದಾರೆ ಅನ್ನೋಕೆ ಸಾಕ್ಷಿ–ಶೋಷಿತನಿಗೆ ಧೈರ್ಯ, ಶೋಷಕನಿಗೆ ಭಯಉಂಟು ಮಾಡೋದು ನಮ್ಮ ಸಾಹಿತ್ಯದ ಗುರಿ ಆಗಬೇಕು. ಸ್ವಾಭಿಮಾನದ ಸಾಧನ ಆಗಬೇಕು."

ಹೀಗೆಂದು ಕರೆಕೊಟ್ಟವರು ಸಾಹಿತ್ಯ ಮತ್ತು ರಾಜಕೀಯ ಚಿಂತನೆ ಗೋಷ್ಠಿ ಉದ್ಘಾಟಿಸಿದ ಸಿದ್ಧಲಿಂಗಯ್ಯ. ಎರಡು ದಿನಗಳ ಮೂರನೇ ಕರ್ನಾಟಕ ರಾಜ್ಯ ಬಂಡಾಯ ಸಾಹಿತ್ಯ ಸಮ್ಮೇಳನ ಉದ್ಘಾಟಿಸಿ ಮಾತನಾಡಬೇಕಿದ್ದ ಖ್ಯಾತ ಸಾಹಿತಿ ಶ್ರೀ ದೇವನೂರ ಮಹಾದೇವ ಅವರು ಪುಸ್ತಕ ಬಿಡುಗಡೆ ಮಾಡುವ ಮೂಲಕ ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ಬಿಡುಗಡೆಯಾದ ಪುಸ್ತಕಗಳು :

1) ಬುದ್ಧ ಮತ್ತು ಬೌದ್ಧ ಧರ್ಮದ ಭವಿಷ್ಯ
ಮೂಲ : ಬಿ. ಆರ್. ಅಂಬೇಡ್ಕರ್
ಅನು : ಟೇ.ಕಾ. ಮೂರ್ತೀಶ್ವರಯ್ಯ

2) ದಲಿತ ಸಾಹಿತ್ಯ ಚಳುವಳಿ : ಶಿವಾಜಿ ಗಣೇಶನ್

3) ಬಂಡಾಯ ಕಥೆಗಳು!
ಸಂ. : ಡಾ. ಆರ್ಕೆ. ಮಣಿಪಾಲ
ಸಿ. ವಿ. ಪಾಟೀಲ

4) ನೆಲೆ ಬೆಲೆ : ಬಿ. ಟಿ. ಲಲಿತಾ ನಾಯಕ

5) ಬರಹಗಾರರ ದೃಷ್ಟಿಯಲ್ಲಿ ಅಂತರ್‌ಜಾತೀಯ, ಅಂತರ್ ಮತೀಯ ಮದುವೆಗಳು ; ಸಂ. ಬಸರಾಳು ಶಂಕರ

ಪ್ರಾರಂಭದಲ್ಲಿ ಕರ್ನಾಟಕ ರಾಜ್ಯ ಬಂಡಾಯ ಸಾಹಿತ್ಯ ಸಮಿತಿ ಸಂಚಾಲಕ ಶ್ರೀ ಬರಗೂರು ರಾಮಚಂದ್ರಪ್ಪನವರು ಸಮ್ಮೇಳನವನ್ನು ಸ್ವಾಗತಿಸುತ್ತಾ 'ಬಂಡಾಯ' ಪದ ಬರಿ ಜಗ್ಗಾಡುವುದಲ್ಲ. ನಿರುದ್ಯೋಗ ಸಮಸ್ಯೆಗೆ ಬಂಡಾಯದವರು ಏನು ಮಾಡಿದರು? ಎಂದು ಕೇಳುವುದು ಸಾಂಸ್ಕೃತಿಕ ಪರಿಜ್ಞಾನ ಇಲ್ಲದಿರುವುದು. ನಾನು ಮತ್ತೆ ಮತ್ತೆ ಸ್ಪಷ್ಟಪಡಿಸಬಯಸುತ್ತೇನೆ; 'ಬಂಡಾಯ ಸಾಹಿತ್ಯ' ಸಾಂಸ್ಕೃತಿಕ ಚಳುವಳಿ ಎಂದು. ಸಾಂಸ್ಕೃತಿಕ ಚಳುವಳಿಯ ಇತಿಮಿತಿ ಅರ್ಥಮಾಡಿಕೊಳ್ಳದೇ ಇರುವಾಗ ಬಂಡಾಯವನ್ನು ರಾಜಕೀಯ ಪಕ್ಷ ಅನ್ನಾರೆ. ಅದಕ್ಕಾಗಿ ವಿಮರ್ಶಾತ್ಮಕವಾಗಿ, ವಸ್ತುನಿಷ್ಠವಾಗಿ ಬರದೇ ಇರುವ ಟೀಕೆಯನ್ನು ಸ್ವೀಕರಿಸಬೇಕಿಲ್ಲ' ಎಂದರು. ಪ್ರಾರಂಭದಲ್ಲಿ ಬೀದರ ಸಮುದಾಯದವರಿಂದ ಕ್ರಾಂತಿಗೀತೆಗಳಾದವು. ಕೊನೆಯಲ್ಲಿ ಶ್ರೀ ಚೆನ್ನಣ್ಣ ವಾಲೀಕಾರ ವಂದಿಸಿದರು.

(ಬಂಡಾಯ ಸಾಹಿತ್ಯ ಸಂಘಟನೆಯ ರಾಜ್ಯ ಸಂಚಾಲಕರಾಗಿ ಶ್ರೀ ಬರಗೂರು ರಾಮಚಂದ್ರಪ್ಪ ಮತ್ತು ಸಿದ್ಧಲಿಂಗಯ್ಯ ಸರ್ವಾನುಮತದಿಂದ ಪುನರಾಯ್ಕೆಯಾಗಿದ್ದಾರೆ. ರಾಜ್ಯಮಟ್ಟದ ಸಂಘಟನಾ ಸಂಚಾಲಕರಾಗಿ ಶ್ರೀ ರಮಜಾನ್‌ದರ್ಗಾ ಸರ್ವಾನುಮತದಿಂದ ಆಯ್ಕೆಯಾಗಿದ್ದಾರೆ.

●

ಸಂಪಾದಕೀಯ

(ಒಂದನೇ ಪುಟದಿಂದ)

ಸರಕಾರದ ಬತ್ತಳಿಕೆಯಲ್ಲಿ ಈಗಾಗಲೇ 'ಅಗತ್ಯಸೇವಾ ನಿರ್ವಹಣಾ ಶಾಸನ', 'ಅವಶ್ಯಕ ಸಾಮಗ್ರಿಗಳ ಶಾಸನ' ಇತ್ಯಾದಿ ಅಸ್ತ್ರಗಳು ಇದೆಯೆನ್ನುವುದು ಸರಕಾರ ಜನರನ್ನು ಎದುರಿಸಲು ಶಾಸನಗಳನ್ನು ಜಾರಿಗೊಳಿಸುತ್ತದೆ ಎಂಬುದನ್ನು ತೋರಿಸುತ್ತದೆ. ವಾಸ್ತವಿಕವಾಗಿ ಈ ಶಾಸನಗಳು ಅಧಿಕಾರಶಾಹಿಯ ಕಾನೂನುಬಾಹಿರ ಚಟುವಟಿಕೆಗಳನ್ನು ಕಾನೂನುಬದ್ಧಗೊಳಿಸುತ್ತಿವೆ.

ಈ 'ಅಗತ್ಯಸೇವೆ'ಗಳು ಸಮುದಾಯಕ್ಕೆ ಅಗತ್ಯವಾದವುಗಳು ಎಂದು ಸರಕಾರ ವಾದಿಸುತ್ತಿದೆ. ಏನೊಂದು ವಿಪರ್ಯಾಸ ! ಈ ದೇಶದ ರಾಜಕೀಯ ಪ್ರಜ್ಞೆಯುಳ್ಳ ಬಹುಸಂಖ್ಯಾತ ಜನ ಅಂದರೆ ಈ ದೇಶದ ಸಮುದಾಯ ಈ ಅಧಿಸೂಚನೆಯನ್ನು ತಮ್ಮ ಸ್ವಾತಂತ್ರ್ಯಗಳಿಗೆ ತೀರಾ ಅಪಾಯಕಾರಿಯೆಂದು ಭಾವಿಸುತ್ತಿದೆ. ಜನರ ಹೋರಾಟಗಳನ್ನು ಬಗ್ಗುಬಡಿಯಲು ಕಾರ್ಮಿಕವರ್ಗ ಹಾಗೂ ಇತರ ದುಡಿಯುವ ಜನರನ್ನು ಲೂಟಿ ಹೊಡೆದು ದೇಶೀ ಹಾಗೂ ವಿದೇಶೀ ಗುತ್ತೇದಾರಿಗಳ ತಿಜೋರಿ ತುಂಬಿಸಲು ಈ ಸರ್ವಾಧಿಕಾರೀ ಶಾಸನಗಳನ್ನು ಜಾರಿಗೊಳಿಸಲಾಗುತ್ತಿದೆ. ಈ ಗುತ್ತೇದಾರಿಗಳ ಅಸ್ತಿತ್ವಕ್ಕೆ ಈ ಶಾಸನಗಳು ಅಗತ್ಯ. ●

ಕನಿಷ್ಠಕೂಲಿ ಜಾರಿಗೆ ತರಲು ಒತ್ತಾಯಿಸಿ ಧರಣಿ ಸತ್ಯಾಗ್ರಹ

ಕನಿಷ್ಠ ಕೂಲಿ ಜಾರಿಗೆ ತರಬೇಕೆಂದು ಸರಕಾರವನ್ನು ಒತ್ತಾಯಿಸಿ ಬೆಂಗಳೂರು ಜಿಲ್ಲಾ ಸಿ. ಐ. ಟಿ. ಯು. ನೇತೃತ್ವದಲ್ಲಿ 15-2-82ರಂದು ವಿಧಾನಸೌಧದೆದುರು ಧರಣಿ ಸತ್ಯಾಗ್ರಹ ನಡೆಸಲಿದೆ.

ಸಿ. ಐ. ಟಿ. ಯು. ಬೆಂಗಳೂರು ಜಿಲ್ಲಾ ಕಾರ್ಯಕರ್ತರೆಲ್ಲರೂ ಪಾಲ್ಗೊಳ್ಳಬೇಕೆಂದು ಕಾರ್ಯದರ್ಶಿ ಕಾಂ. ಅನಂತರಾವ್ ಮನವಿ ಮಾಡಿದ್ದಾರೆ.

ಕನಿಷ್ಠಕೂಲಿ ಕೂಡಲೇ ಜಾರಿಗೊಳಿಸಿ

ರಾಜ್ಯಸರಕಾರವು 26 ಕೈಗಾರಿಕೆಗಳಲ್ಲಿ ಕನಿಷ್ಠ ಕೂಲಿ ವಿಮರ್ಶೆಗಾಗಿ ಕರಡುನಿರ್ಣಯವನ್ನು ಕೈಗೊಂಡಿದ್ದರೂ, ಆ ಕುರಿತು ಯಾವುದೇ ತೀರ್ಮಾನಕ್ಕೆ ಬರದೇ ಮಾಲೀಕರಿಗೆ ಮತ್ತು ಆಡಳಿತವರ್ಗಗಳಿಗೆ ಅನುಕೂಲ ಮಾಡಿಕೊಡುತ್ತಿದೆ ಎಂದು ಸಿ. ಐ. ಟಿ. ಯು. ರಾಜ್ಯಸಮಿತಿ ಅಧ್ಯಕ್ಷ ಕಾಂ. ಸೂರ್ಯನಾರಾಯಣ ರಾವ್ ಆಪಾದಿಸಿದ್ದಾರೆ.

ಕಾಂ. ಸೂರಿಯವರು 5-2-82 ರಂದು ಹೊರಡಿಸಿದ ಪತ್ರಿಕಾ ಪ್ರಕಟಣೆಯಲ್ಲಿ ಈ ವಿಷಯ ಪ್ರಸ್ತಾಪಿಸಿದ್ದಾರೆ.

ಕರಡು ನಿರ್ಣಯಕ್ಕೆ 28–11–81 ರಂದು ಮಾಲೀಕರ ಪ್ರತಿನಿಧಿಗಳು ತಮ್ಮ ಅಸಮ್ಮತಿ ಸೂಚಿಸಿದ್ದರು. ಕಾರ್ಮಿಕರ ಪ್ರತಿನಿಧಿಗಳು 500 ರೂ. ಕನಿಷ್ಠಕೂಲಿ ಇರಲೇಬೇಕೆಂದು ಒತ್ತಾಯಿಸಿದ್ದರು. ಕನಿಷ್ಠಕೂಲಿ ನಿಗದಿಪಡಿಸುವ ವಿಷಯದಲ್ಲಿ ಅನೇಕ ತ್ರಿಪಕ್ಷೀಯ ಸಭೆ ನಡೆದಿದ್ದವು. ಈ ಕುರಿತು 1-1-82ರಂದು ನಡೆದ ಸಭೆಯಲ್ಲಿ, "ಸರಕಾರ ನಿಗದಿಪಡಿಸಲಿರುವ ಕನಿಷ್ಠ ಕೂಲಿ ಯಾವುದೇ ಸಂದರ್ಭದಲ್ಲಿ 500ರೂ.ಕ್ಕಿಂತ ಕಡಿಮೆ ಇರಕೂಡದು; ಹೆಚ್ಚಳವಾಗುವ ಪ್ರತಿ ಬೆಲೆಸೂಚ್ಯಂಕಕ್ಕೆ ತಲಾ ಐದು ಪೈಸೆಯಂತೆ ಹೆಚ್ಚು ನಿಗದಿಪಡಿಸಿ ಇದನ್ನು ಕನಿಷ್ಠ ಕೂಲಿಗೆ ಜೋಡಿಸಬೇಕೆಂದು ಕಾಂ. ಸೂರಿಯವರು ನಿರ್ಣಯ ಮಂಡಿಸಿದ್ದರು. ಕನಿಷ್ಠಕೂಲಿ ಸಲಹಾ ಸಮಿತಿಯ ಇನ್ನೊಬ್ಬ ಸದಸ್ಯರಾದ ಕಾಂ. ಎಂ. ಸಿ. ನರಸಿಂಹನ್ ಈ ನಿರ್ಣಯವನ್ನು ಅನುಮೋದಿಸಿದ್ದರು. ಇನ್ನು ಕೆಲವು ಸಲಹೆ ಸೂಚನೆಗಳು ಮಂಡಿಸಲ್ಪಟ್ಟ ನಂತರ ಕೊನೆಯಲ್ಲಿ, ಕನಿಷ್ಠಕೂಲಿಯ ನಿಗದಿ ಕುರಿತು ಸರಕಾರದ ಕರಡು ನಿರ್ಣಯವನ್ನು ಒಪ್ಪಬೇಕೆಂದೂ, ಮತ್ತೆ ಬೆಲೆಸೂಚ್ಯಂಕವನ್ನು ಕನಿಷ್ಠ ಕೂಲಿಗೆ ಜೋಡಿಸುವುದರ ಬಗ್ಗೆ ಅಲ್ಪಸ್ವಲ್ಪ ಬದಲಾವಣೆ ತರಬೇಕೆಂದೂ ಈ ಬಗ್ಗೆ ಫಿಲಂ ಮತ್ತು ಹೋಟೆಲ್ ಉದ್ದಿಮೆಗಳಲ್ಲಿರುವ ವಿಧಾನ ಅನುಸರಿಸುವಂತೆ ಬಹುಮತದಲ್ಲಿ ತೀರ್ಮಾನಿಸಲಾಯಿತು.

ಈ ಮೇಲ್ಕಾಣಿಸಿದ ನಿರ್ಣಯವನ್ನು ಸಲಹಾ ಸಮಿತಿಯಲ್ಲಿ ಬಹುಮತದಲ್ಲಿ ಒಪ್ಪಿ ಒಂದು ತಿಂಗಳು ಕಳೆದಿದ್ದರೂ ಸರಕಾರ ಈ ವಿಷಯದಲ್ಲಿ ಯಾವುದೇ ತೀರ್ಮಾನ ಕೈಗೊಂಡಿಲ್ಲ. ಈ ಧೋರಣೆಯಿಂದ ಕಾರ್ಮಿಕರಿಗೆ ಲಕ್ಷಾಂತರ ರೂ. ನಷ್ಟವು ಮತ್ತು ಮಾಲೀಕರಿಗೆ ಸಹಾಯಕವಾಗಿದೆ. ಕನಿಷ್ಠಕೂಲಿಗೆ ಸಂಬಂಧಿಸಿ ಆಜ್ಞೆಯನ್ನು ಕೂಡಲೇ ಹೊರಡಿಸಬೇಕೆಂದು ಕಾಂ. ಸೂರಿಯವರು ಒತ್ತಾಯಿಸಿದ್ದಾರೆ.

ಖಾಯಂ ಕೆಲಸಗಳಿಗಾಗಿ ಮಾಲೀಕರುಗಳು ಹಂಗಾಮಿಯಾಗಿ ಕೆಲಸಗಾರರನ್ನು ನಿಯಮಿಸಿ ಅವರಿಗೆ ಸರಿಯಾದ ಸಂಬಳ ಮತ್ತು ಅನುಕೂಲತೆಗಳನ್ನು ಮಾಡಿಕೊಡದೇ ಅವರನ್ನು ವಿಪರೀತ ಶೋಷಿಸುತ್ತಿದ್ದಾರೆ. ಉದಾಹರಣೆಯಾಗಿ ಆಂಧ್ರ ಸ್ಟೀಲ್, ಕ್ಯಾಪ್ ಸ್ಟೀಲ್, ಭೋರುಕಾ ಮೊದಲಾದ ಕಾರ್ಖಾನೆಗಳಲ್ಲಿ ಆಡಳಿತವರ್ಗಗಳು ಹಂಗಾಮಿ ನೌಕರರ ಸಂಖ್ಯೆ ಖಾಯಂ ನೌಕರರ ಸಂಖ್ಯೆಗಿಂತ ಎರಡು ಪಟ್ಟಿದೆ. ಹಂಗಾಮಿ ನೌಕರರನ್ನು ಕೂಡಲೇ ಖಾಯಂಗೊಳಿಸಬೇಕೆಂದು, ಮತ್ತು ಕಾಂಟ್ರ್ಯಾಕ್ಟ್ ಲೇಬರ್ ಕಾನೂನನ್ನು ಜಾರಿಗೆ ತರಬೇಕೆಂದು ಕಾಂ. ಸೂರ್ಯನಾರಾಯಣ ರಾವ್ ಒತ್ತಾಯಿಸಿದ್ದಾರೆ.

ಎಚ್. ಎ. ಎಲ್.ನಲ್ಲಿ ಆಡಳಿತ ವರ್ಗ ಅನುಸರಿಸುತ್ತಿರುವ ದಮನ ನೀತಿಯನ್ನು ತೀವ್ರ ಖಂಡಿಸಿರುವ ಕಾಂ. ಸೂರಿಯವರು ವಜಾಮಾಡಲ್ಪಟ್ಟ ಕಾರ್ಮಿಕರನ್ನು ಕೆಲಸಕ್ಕೆ ಕೂಡಲೇ ತೆಗೆದುಕೊಳ್ಳುವಂತೆ ಒತ್ತಾಯಿಸಿದ್ದಾರೆ.

ಮತ್ತು ರಾಜ್ಯಸರಕಾರಿ ನೌಕರರ ಮತ್ತು ವಿದ್ಯುಚ್ಛಕ್ತಿ ನೌಕರರ ಹೋರಾಟಕ್ಕೆ ಸಿ.ಐ.ಟಿ.ಯು. ಪರವಾಗಿ ಬೆಂಬಲ ವ್ಯಕ್ತಪಡಿಸಿದ್ದಾರೆ.

○

Printed by P. Ramachandra Rao at Nutan Printing Publishing & Training Centre, 405, Sampige Road, Malleswaram, Bangalore-560 003, and Published by him on behalf of the Communist Party of India (Marxist) Karnataka State Committee, L-56, K. V. Temple Street Sultanpet, Bangalore-560 053. Editorial and managerial office : L-56, K. V. Temple Street, Sultanpet Bangalore-560 053. Phone-24154
EDITOR : M. K. BHAT